# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ


ಆಡಳಿತ ಕಛೇರಿ : 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.

Tel. : 080-4852 1054 E-mail : textilecbl@gmail.com Website : www.tcbl.co.in


## 2020-21ನೇ ಸಾಲಿನ 58ನೇ ಸಾಮಾನ್ಯ ಸರ್ವಸದಸ್ಯರ ವಾರ್ಷಿಕ ಸಭೆ

ದಿನಾಂಕ : 22–12–2021ನೇ ಬುಧವಾರ
ಬೆಳಿಗ್ಗೆ 10–30 ಘಂಟೆಗೆ
ವರ್ಚುಯಲ್/ವಿಡಿಯೋ ಕಾನ್ಫರೆನ್ಸ್ ಮೂಲಕ

(31-03-2021 ಕ್ಕೆ ಬಂಡವಾಳ ಪ್ರಮಾಣ ಶೇ. 16.67%)
(CAPITAL ADEQUACY RATIO 16.67%)

**ಸಾಮಾನ್ಯ ಸದಸ್ಯರಿಗೆ ವಿಶೇಷ ಸೂಚನೆ** (ಹಳದಿ ಬಣ್ಣದ ಗುರುತಿನ ಚೀಟಿ ಹೊಂದಿರುವವರಿಗೆ ಮಾತ್ರ)

**ವರ್ಚುಯಲ್ ಸಭೆಯಲ್ಲಿ ಭಾಗವಹಿಸಲು ಸದಸ್ಯರು ಈ ಕೆಳಕಂಡ ಲಿಂಕ್ ಅಥವಾ QR ಕೋಡ್ ಬಳಸುವುದು.**

**https://viewnow.in/TCBL/AGM/**

OR

QR CODE

| | |
|---|---|
| ಸದಸ್ಯತ್ವದ ಸಂಖ್ಯೆ | Membership No. |
| ಹೆಸರು | Name |
| ಸಲ್ಲಿಸು | Submit |

## ವಿಡಿಯೋ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಲು ಸದಸ್ಯರು ಅನುಸರಿಸಬೇಕಾದ ವಿಧಾನ / Steps to join Video Conference

| | |
|---|---|
| ವಿಡಿಯೋ ಕಾನ್ಫರೆನ್ಸ್ ಲಿಂಕ್‌ಅನ್ನು ಕ್ಲಿಕ್ ಮಾಡುವುದು | Click on Video Conference link to join two way Communication |
| ಜೂಮ್ ಆಪ್ ಅನ್ನು ಕ್ಲಿಕ್ ಮಾಡುವ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವುದು | Download Zoom application by clicking on Download from Zoom |
| ಜೂಮ್ ಆಪ್ ತೆರೆಯಲು ಜೂಮ್ ಆಪ್ ತೆರೆಯುವ ಕಿಂಡಿಯನ್ನು ಕ್ಲಿಕ್ ಮಾಡುವುದು | Click open with Zoom |
| ಕಾಲ್ ಓವರ್ ಇಂಟರ್‌ನೆಟ್ ಕೀ ಅನ್ನು ಕ್ಲಿಕ್ ಮಾಡುವುದು (ಆಡಿಯೋ/ವಿಡಿಯೋ ಸ್ಥಗಿತಗೊಳಿಸಲು–ಅವಶ್ಯವಿದ್ದಲ್ಲಿ) | Click-Call Over Internet (Mute Video/Audio as needed) |
| ಪ್ರಶ್ನೆ ಕೇಳಲು ಮೋರ್‌ಆನ್ ಕೀ ಅನ್ನು ಬಳಸಿ ಕೈ ಎತ್ತುವ ಚಿಹ್ನೆ ಬಳಸುವುದು. | Click on more button to ask question - Use Hand Raise option. |

ಹೆಚ್ಚಿನ ಮಾಹಿತಿಯನ್ನು ಬ್ಯಾಂಕಿನ ವೆಬ್‌ಸೈಟ್ www.tcbl.co.inನಿಂದ ಪಡೆಯಬಹುದು

For more information visit Bank Website www.tcbl.co.in

# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.

## 2017-18 ರಿಂದ 2022-23 ರ ಸಾಲಿನ ನಿರ್ದೇಶಕ ಮಂಡಳಿ


ಶ್ರೀ ಕೃ.ಅಶ್ವತ್ಥನಾರಾಯಣರವರು
ಅಧ್ಯಕ್ಷರು


ಶ್ರೀ ಟಿ.ಭಾಸ್ಕರ್ (ಟಿ.ಟಿ.)ರವರು
ಉಪಾಧ್ಯಕ್ಷರು


ಶ್ರೀ ಟಿ.ಎಸ್.ಕೃಷ್ಣಮೂರ್ತಿ (ಜರಿಕೃಷ್ಣ)ರವರು
ನಿರ್ದೇಶಕರು


ಶ್ರೀ ಆರ್.ಭಾಸ್ಕರ್ (ಗಿಣಿ)ರವರು
ನಿರ್ದೇಶಕರು


ಶ್ರೀ ಎಣ್ಣೆಗೆರೆ ಆರ್.ವೆಂಕಟರಾಮಯ್ಯ(ವೈ.ವಿ.ರಾಜು)ರವರು
ನಿರ್ದೇಶಕರು


ಶ್ರೀ ಎಸ್.ಉಮಾಶಂಕರ್‌ರವರು
ನಿರ್ದೇಶಕರು


ಶ್ರೀ ಕುಲಾವಿ ಆರ್.ಮಲ್ಲಣ್ಣರವರು
ನಿರ್ದೇಶಕರು


ಶ್ರೀ ಊರುಕೆರೆ ಜಿ.ದಯಾನಂದರವರು
ನಿರ್ದೇಶಕರು


ಶ್ರೀ ಮಾಧವರವರು
ನಿರ್ದೇಶಕರು


ಶ್ರೀಮತಿ ಹೆಚ್.ಪಾರ್ವತಿ (ರಂಗನಾಯಕಿ)ರವರು
ಮಹಿಳಾ ನಿರ್ದೇಶಕರು


ಶ್ರೀಮತಿ ಆರ್.ದೇವಕಿರವರು
ಮಹಿಳಾ ನಿರ್ದೇಶಕರು


ಶ್ರೀ ಡಿ.ಹೆಚ್.ಜಗನ್ನಾಥ್ (ದೊಮ್ಮಸಂದ್ರ)ರವರು
ಹಿಂದುಳಿದ ವರ್ಗದ ನಿರ್ದೇಶಕರು


ಶ್ರೀ ದೇವರಾಜು ಪಿ.ರವರು
ಹಿಂದುಳಿದ ವರ್ಗದ ನಿರ್ದೇಶಕರು


ಶ್ರೀ ಪಿ.ಎಂ.ನಾಗರಾಜುರವರು
ಪರಿಶಿಷ್ಟ ಪಂಗಡ ನಿರ್ದೇಶಕರು


ಶ್ರೀ ಎಲ್.ಕೆ.ಜಯರಾಮ್‌ರವರು
ವೃತ್ತಿಪರ ನಿರ್ದೇಶಕರು (ಬ್ಯಾಂಕಿಂಗ್ ಪರಿಣಿತರು)
ದಿ : 25-05-2021 ರಿಂದ


ಶ್ರೀ ಜಿ.ಶಿವಕುಮಾರ್‌ರವರು
ವೃತ್ತಿಪರ ನಿರ್ದೇಶಕರು
(ಚಾರ್ಟರ್ಡ್ ಅಕೌಂಟೆಂಟ್)


ಶ್ರೀ ಡಿ.ಸಂಜೀವಣ್ಣರವರು
ಮುಖ್ಯ ಕಾರ್ಯನಿರ್ವಾಹಕರು (ಪ್ರ)

# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು-560 002.

## 2020–21ನೇ ಸಾಲಿನ 58ನೇ ಸಾಮಾನ್ಯ ಸರ್ವ ಸದಸ್ಯರ ವಾರ್ಷಿಕ ಸಭೆಯ ನೋಟೀಸು.

2020–21 ನೇ ಸಾಲಿನ 58ನೇ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ದಿನಾಂಕ: 22–12–2021 ರಂದು ಬುಧವಾರ ಬೆಳಿಗ್ಗೆ 10.30 ಘಂಟೆಗೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೃ. ಅಶ್ವತ್ಥನಾರಾಯಣರವರ ಅಧ್ಯಕ್ಷತೆಯಲ್ಲಿ ವರ್ಚುಯಲ್/ವಿಡಿಯೋ ಕಾನ್ಫರೆನ್ಸ್ ಮೂಲಕ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ವರ್ಚುಯಲ್ / ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆಯಲ್ಲಿ ಪಾಲ್ಗೊಂಡು ಕಾರ್ಯ ಕಲಾಪಗಳನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

### ಕಾರ್ಯಸೂಚಿ

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. ಸಭೆಯ ನೋಟೀಸನ್ನು ಓದಿ ರೆಕಾರ್ಡ್ ಮಾಡುವುದು. (ನಿ.ಮ.ವ.ಪು : 01–02)
4. 2019–20ನೇ ಸಾಲಿನ ಸರ್ವ ಸದಸ್ಯರ ಸಭೆಯ ಕಲಾಪಗಳನ್ನು ಓದಿ ಖಾಯಂ ಮಾಡುವುದು. (ಆ.ವ.ಪು : 02–24)
5. 2020–21ನೇ ಸಾಲಿನ ನಿರ್ದೇಶಕ ಮಂಡಳಿ ವರದಿ ಅಂಗೀಕರಿಸುವುದು. (ನಿ.ಮ.ವ.ಪು : 06–15)
6. 2020–21ನೇ ಸಾಲಿನ ಲೆಕ್ಕ ಪರಿಶೋಧನೆಯಾದ ಲೆಕ್ಕ ಪತ್ರಗಳ ಪರಿಶೀಲನೆ ಮತ್ತು ಅನುಮೋದನೆ ಹಾಗೂ ಲೆಕ್ಕ ಪರಿಶೋಧನಾ ವರದಿ ಮತ್ತು ವರದಿಗೆ ನಿರ್ದೇಶಕ ಮಂಡಳಿಯವರು ನೀಡಿರುವ ಸಮಾಧಾನಗಳನ್ನು ಪರಿಶೀಲಿಸಿ ಅಂಗೀಕರಿಸುವುದು. (ಆ.ವ.ಪು : 25–107)
7. 2020–21ನೇ ಸಾಲಿನಲ್ಲಿ ಬಡ್ಜೆಟ್ ಮಂಜೂರಾತಿಗಿಂತ ಹೆಚ್ಚುವರಿ ಖರ್ಚಾಗಿರುವ ಬಾಬತ್ತಿನ ಅನುಮೋದನೆ. (ನಿ.ಮ.ವ.ಪು : 16)
8. 2020–21ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಮತ್ತು ಲಾಭಾಂಶ (ಡಿವಿಡೆಂಡ್) ಘೋಷಣೆಗೆ ಮಂಜೂರಾತಿ ನೀಡುವುದು. (ನಿ.ಮ.ವ.ಪು : 17)
9. 2021–22ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ ಪಟ್ಟಿಯನ್ನು ಅಂಗೀಕರಿಸುವುದು. (ನಿ.ಮ.ವ.ಪು : 18–19)

10. ಬ್ಯಾಂಕಿನ ಮುಂಬರುವ ವರ್ಷದ ಕಾರ್ಯ ಚಟುವಟಿಕೆಗಳ ಬಗ್ಗೆ ಆಡಳಿತ ಮಂಡಳಿಯ ರೂಪು ರೇಷೆ. (ನಿ.ಮ.ವ.ಪು : 19)

11. ಬ್ಯಾಂಕಿನ ಅಧಿಕೃತ ಷೇರು ಬಂಡವಾಳಕ್ಕೆ ಸಭೆಯು ನೀಡಿದ್ದ ಅನುಮತಿಯನ್ನು ಮುಂದುವರಿಸುವ ಬಗ್ಗೆ. (ನಿ.ಮ.ವ.ಪು : 19)

12. ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಮಾರ್ಗಸೂಚಿಯಂತೆ 2021–22ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಂಡಿರುವ ಬಗ್ಗೆ (ನಿ.ಮ.ವ.ಪು : 20)

13. ನಿರ್ದೇಶಕರುಗಳಿಗೆ ಅವರ ಹತ್ತಿರದ ಸಂಬಂಧಿಗಳಿಗೆ ಮತ್ತು ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ನೀಡಿದ್ದ ಸಾಲಗಳು ಮತ್ತು ಇದರ ಸುಸ್ತಿ ಸಾಲಗಳು ಏನಾದರೂ ಇದ್ದಲ್ಲಿ ಅವುಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಪರಿವೀಕ್ಷಣೆ. (ನಿ.ಮ.ವ.ಪು : 20)

14. ನಿರ್ದೇಶಕರು ಬ್ಯಾಂಕಿನ ಸೇವೆಗಳನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಅವಲೋಕಿಸುವುದು. (ನಿ.ಮ.ವ.ಪು : 20)

15. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ನ್ನು ಮತ್ತಷ್ಟು ತಿದ್ದುಪಡಿ ಮಾಡಿ ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ 07.10.2021ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆಯಂತೆ ಬ್ಯಾಂಕಿನ ಉಪನಿಯಮಗಳಿಗೆ ಮಾಡಬೇಕಾದ ತಿದ್ದುಪಡಿಗಳ ಅನುಮೋದನೆ. (ನಿ.ಮ.ವ.ಪು : 21–24)

16. ಅಧ್ಯಕ್ಷರ ಅಪ್ಪಣೆ ಮೇರೆಗೆ ಸದಸ್ಯರಿಂದ ಬರಬಹುದಾದ ನಿರ್ಣಯಗಳು ಮತ್ತು ಸೂಚಿಸಬಹುದಾದ ವಿಷಯಗಳು.

17. ವಂದನಾರ್ಪಣೆ.

**ನಿರ್ದೇಶಕ ಮಂಡಳಿ ಅಪ್ಪಣೆ ಮೇರೆಗೆ**

**ಸಹಿ/–**

**ಬೆಂಗಳೂರು**
**ತಾ: 30/10/2021**

**ಡಿ.ಸಂಜೀವಣ್ಣ**
ಮುಖ್ಯ ಕಾರ್ಯನಿರ್ವಾಹಕರು (ಪ್ರ).

**ಸೂಚನೆ: 1. ನಿ.ಮ.ವ.ಪು – ನಿರ್ದೇಶಕ ಮಂಡಳಿ ವರದಿ ಪುಟ ಸಂಖ್ಯೆ.**
**ಆ.ವ.ಪು – ಆಡಿಟ್ ವರದಿ ಪುಟ ಸಂಖ್ಯೆ.**

**2. ಕಾರ್ಯಸೂಚಿ ಅನ್ವಯ ಯಾರೇ ಸದಸ್ಯರು ಸಭೆಯಲ್ಲಿ ಚರ್ಚಿಸಲು ಇಚ್ಛಿಸಿದಲ್ಲಿ ಆ ಬಗ್ಗೆ ಲಿಖಿತ ಮೂಲಕ ನಮ್ಮ ಬ್ಯಾಂಕಿನ ಪ್ರಧಾನ ಕಛೇರಿಗೆ ಮುಂಚಿತವಾಗಿ ಅಂದರೆ 7 ದಿನಗಳೊಳಗೆ ತಿಳಿಸಿ ಅವರ ಹೆಸರನ್ನು ನೊಂದಾಯಿಸಿಕೊಳ್ಳತಕ್ಕದ್ದು. ಇಂತಹ ಸೂಚನೆ ನಮ್ಮ ಕಛೇರಿಗೆ ದಿ. 15.12.2021ರ ಒಳಗೆ ನೀಡತಕ್ಕದ್ದು.**

## ಸದಸ್ಯರ ಗಮನಕ್ಕೆ

1. ಬೈಲಾ ನಂ.45ರ ಪ್ರಕಾರ ಬ್ಯಾಂಕಿಗೆ ಸಂಬಂಧಪಟ್ಟ ಬೇರಾವುದೇ ವಿಷಯದಲ್ಲಿ ಹೆಚ್ಚಿನ ಸಮಜಾಯಿಷಿ ಅಥವಾ ವಿವರಗಳು ಬೇಕೆಂದು ಬಯಸಿದರೆ ಸಂಬಂಧಪಟ್ಟ ಸುಸ್ತಿದಾರರಲ್ಲದ ಸದಸ್ಯರು ಕಡೇ ಪಕ್ಷ 7 ದಿನಗಳ ಮುಂಚೆಯಾದರೂ ಅಂದರೆ ದಿನಾಂಕ: 15.12.2021 ರೊಳಗಾಗಿ ದಯವಿಟ್ಟು ಬ್ಯಾಂಕಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.
2. ಷೇರು ಖಾತೆಯಲ್ಲಿ ಸಹಿ ಹಾಕದಿರುವವರು ಸಹಿ ಹಾಕತಕ್ಕದ್ದು ಮತ್ತು ನಾಮಿನೇಷನ್ ಸೂಚನೆ ಮಾಡದೇ ಇರತಕ್ಕವರು ತಮ್ಮ ಹಿತದೃಷ್ಟಿಯಿಂದ ನಾಮಿನಿಯ ಹೆಸರನ್ನು ಸೂಚಿಸತಕ್ಕದ್ದು. ಷೇರು ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳದೆ ಇರುವ ಸದಸ್ಯರು ದಯವಿಟ್ಟು ಕಛೇರಿಗೆ ಭೇಟಿ ನೀಡಿ ತೆಗೆದುಕೊಳ್ಳುವುದು.
3. ದಿನಾಂಕ: 27.09.1991 ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನವಾದಂತೆ ಆಡಿಟ್ ಆದ ಲೆಕ್ಕ ಪತ್ರಗಳ ಜಮಾ-ಖರ್ಚು ತಃಖ್ತೆ, ಆಸ್ತಿ-ಜವಾಬ್ದಾರಿ ತಃಖ್ತೆ, ಲಾಭ-ನಷ್ಟದ ತಃಖ್ತೆ, ಆಡಿಟ್‌ರವರ ವರದಿ ಹಾಗೂ ವರದಿಗೆ ನೀಡಿರುವ ಸಮಾಜಾಯಿಷಿಗಳ ಪ್ರತಿಯನ್ನು ಇಚ್ಛಿಸುವ ಸದಸ್ಯರು ಬ್ಯಾಂಕಿನಲ್ಲೇ ದಿನಾಂಕ: 07.12.2021ರಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.
4. ಸಭೆಯಲ್ಲಿ ಭಾಗವಹಿಸಲು ಸದಸ್ಯರಿಗೆ ನೀಡಿರುವ ಗುರುತಿನ ಸಂಖ್ಯೆ ಬಳಸಿ ಆನ್-ಲೈನ್ ಮೂಲಕ ಲಾಗ್-ಇನ್ ಆಗಿ ತಪ್ಪದೇ ಹಾಜರಾತಿಯನ್ನು ದಾಖಲಿಸುವುದು.
5. ಗುರುತಿನ ಚೀಟಿಯನ್ನು ಪಡೆಯದಿರುವ ಸದಸ್ಯರು ತಮ್ಮ ಭಾವಚಿತ್ರವನ್ನು ಕೂಡಲೇ ಬ್ಯಾಂಕಿಗೆ ನೀಡಿ ಪಡೆಯಬಹುದು ಹಾಗೂ ಗುರುತಿನ ಚೀಟಿ ಪಡೆದಿರುವ ಸದಸ್ಯರು ವಿಳಾಸ ಬದಲಾವಣೆಯಾಗಿದ್ದರೆ ತಕ್ಷಣ ಬ್ಯಾಂಕಿಗೆ ತಿಳಿಸುವುದು.
6. ಹಿಂದಿನ ಸಾಲುಗಳ ಡಿವಿಡೆಂಡನ್ನು ಇನ್ನೂ ತೆಗೆದುಕೊಳ್ಳದೆ ಇರುವ ಸದಸ್ಯರು ದಯವಿಟ್ಟು ತೆಗೆದುಕೊಳ್ಳುವುದು. ಇಲ್ಲದಿದ್ದರೆ ಈ ಮೊದಲೇ ತಿಳಿಸಿರುವಂತೆ ಬೈಲಾ ಸಂಖ್ಯೆ 103ರ ಪ್ರಕಾರ ಪಾವತಿಯಾಗದ ಡಿವಿಡೆಂಡನ್ನು ಆಪದ್ಧನ ನಿಧಿಗೆ ವರ್ಗಾಯಿಸಲಾಗುವುದು.
7. ಸದಸ್ಯರುಗಳು ಉಳಿತಾಯ/ಚಾಲ್ತಿ ಖಾತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಇದು ಸಂವಿಧಾನದ ತಿದ್ದುಪಡಿ ಕಾಯಿದೆ ಪ್ರಕಾರವು ಕಡ್ಡಾಯವಾಗಿರುತ್ತದೆ. ಹಾಗೂ ತಮ್ಮ ಸದಸ್ಯತ್ವದ ಡಿವಿಡೆಂಡ್‌ನ್ನು ವರ್ಗಾಯಿಸಲು ಅನುಕೂಲವಾಗುವುದು.
8. ಬ್ಯಾಂಕಿನ ಸುವರ್ಣ ಮಹೋತ್ಸವದ ನೆನಪಿಗಾಗಿ ಸದಸ್ಯರುಗಳಿಗೆ ಬೆಳ್ಳಿ ನಾಣ್ಯವನ್ನು ಈಗಲೂ ಸಹ ನೀಡುತ್ತಿದ್ದು, ಇನ್ನೂ ಪಡೆಯದೆ ಇರುವ ಸದಸ್ಯರು ಗುರುತಿನ ಚೀಟಿಯ ನಕಲನ್ನು ನೀಡಿ ಬ್ಯಾಂಕಿನ ಮಧ್ಯಾಹ್ನದ ವ್ಯವಹಾರದ ವೇಳೆಯಲ್ಲಿ ಪಡೆದುಕೊಳ್ಳುವುದು.
9. **ಸದಸ್ಯರುಗಳ ಹೆಸರಿನಲ್ಲಿರುವ ಗಡು ಠೇವಣಿ, ಮಂಗಳನಿಧಿ ಠೇವಣಿ ಹಾಗೂ ಆವರ್ತಕ ಠೇವಣಿ (Recurring) ಗಳಿಂದ ಕ್ರೋಢೀಕೃತವಾಗಿ ಗಳಿಸುವ ಬಡ್ಡಿ ಮೊತ್ತ ಒಂದು ವರ್ಷದಲ್ಲಿ ರೂ. 40,000/- ಹಾಗೂ ಹಿರಿಯ ನಾಗರಿಕರು ರೂ. 50,000/-ಗಳು ಅಥವಾ ಅದಕ್ಕೂ ಮೇಲ್ಪಟ್ಟು ಗಳಿಸಿದಾಗ ಕಡ್ಡಾಯವಾಗಿ**

**ಟಿ.ಡಿ.ಎಸ್. ಕಟಾವು ದಿನಾಂಕ: 01.04.2019 ರಿಂದ ಮಾಡಬೇಕಾಗಿರುತ್ತದೆ. ಇದಕ್ಕೆ ಠೇವಣಿದಾರರ ಪಾನ್ ಸಂಖ್ಯೆ ಅಗತ್ಯವಾಗಿರುತ್ತದೆ. ಪಾನ್ ಇಲ್ಲದಿದ್ದ ಪಕ್ಷದಲ್ಲಿ ಶೇ.20 ರಂತೆ ಟಿ.ಡಿ.ಎಸ್. ಕಟಾವು ಮಾಡಬೇಕಾಗಿರುತ್ತದೆಂದು ಆದಾಯ ತೆರಿಗೆ ಇಲಾಖೆಯವರು ಆದೇಶಿಸಿರುತ್ತಾರೆ.**

**10. (DEAF) ಡಿಪಾಸಿಟ್ ಎಜುಕೇಷನ್ ಅವೇರ್‌ನೆಸ್ ಫಂಡ್.**

**ಗ್ರಾಹಕರುಗಳು ಬ್ಯಾಂಕಿನಲ್ಲಿ ಹೊಂದಿರುವ ಯಾವುದೇ ಠೇವಣಿ ಖಾತೆಗಳಲ್ಲಿ ಅಥವಾ ವಾಯಿದೆ ಮುಗಿದು 10 ವರ್ಷಗಳ ಕಾಲ ವ್ಯವಹರಿಸದ ಖಾತೆಗಳಲ್ಲಿನ ಹಣವನ್ನು ಕಡ್ಡಾಯವಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯ ಪ್ರಕಾರ ಅವರಿಗೆ ಕಳುಹಿಸಬೇಕಾಗಿರುತ್ತದೆ. ಇದಕ್ಕೆ ಅವಕಾಶ ನೀಡದಂತೆ ನಿಗಾ ವಹಿಸಲು ಸದಸ್ಯರುಗಳ ಗಮನಕ್ಕೆ ತರುತ್ತಿದ್ದೇವೆ.**

11. ಭಾರತೀಯ ರಿಸರ್ವ್ ಬ್ಯಾಂಕಿನ ನಿಮ್ಮ ಗ್ರಾಹಕರನ್ನು ಅರಿಯಿರಿ ಎಂಬ ಸುತ್ತೋಲೆಯಲ್ಲಿ ತಿಳಿಸಿರುವಂತೆ ಬ್ಯಾಂಕಿನಲ್ಲಿ ಉಳಿತಾಯ/ಚಾಲ್ತಿ, ಇತರೇ ಖಾತೆಗಳನ್ನು ತೆರೆಯಲು ಇಚ್ಛಿಸುವ ಗ್ರಾಹಕರು ತಮ್ಮ ಪಾಸ್‌ಪೋರ್ಟ್/ಪ್ಯಾನ್ ಕಾರ್ಡ್/ವಾಹನ ಚಾಲನ ಪರವಾನಗಿ/ಚುನಾವಣೆ ಆಯೋಗದ ಗುರುತಿನ ಚೀಟಿ/ಆಧಾರ್ ಕಾರ್ಡು ಇಂತಹವುಗಳನ್ನು ಅವರ ಭಾವಚಿತ್ರದೊಂದಿಗೆ ಕಡ್ಡಾಯವಾಗಿ ನೀಡಬೇಕು. ಈ ಮಾಹಿತಿಯನ್ನು ನೀಡಿ ತಮ್ಮ ಖಾತೆಯಲ್ಲಿನ ವಿವರಗಳನ್ನು ಪೂರ್ಣಗೊಳಿಸುವುದು.

12. ಈ ಸುತ್ತೋಲೆಯಲ್ಲಿನ ಕಾಯಿದೆಯು ಈಗಾಗಲೇ ಹೊಂದಿರುವ ಹಳೆಯ ಖಾತೆದಾರರಿಗೂ ಅನ್ವಯವಾಗುತ್ತದೆ. ಆದ್ದರಿಂದ ಮೇಲ್ಕಂಡ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಹಳೆಯ ಖಾತೆದಾರರೂ ಸಹ ಬ್ಯಾಂಕಿಗೆ ಸಲ್ಲಿಸಿ ತಮ್ಮ ಖಾತೆಗಳನ್ನು ಕ್ರಮಗೊಳಿಸಬೇಕಾಗಿ ಕೋರುತ್ತೇವೆ.

13. ಉಳಿತಾಯ / ಚಾಲ್ತಿ ಖಾತೆ ಹೊಂದಿರುವ ಖಾತೆದಾರರು ತಮ್ಮ ಆಧಾರ್ ಸಂಖ್ಯೆಯನ್ನು ಖಾತೆಗಳಿಗೆ ಜೋಡಣೆ ಮಾಡುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಜೋಡಣೆ ಮಾಡದ ಖಾತೆದಾರರು ಕೂಡಲೇ ತಮ್ಮ ಆಧಾರ್ ಸಂಖ್ಯೆಯನ್ನು ತಮ್ಮ ಖಾತೆಗಳಲ್ಲಿ ಜೋಡಣೆ ಮಾಡುವುದು.

# ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.**

## 2020–21ನೇ ಸಾಲಿನ ನಿರ್ದೇಶಕ ಮಂಡಳಿ ಸದಸ್ಯರು

| | | |
|---|---|---|
| 1. | ಶ್ರೀ. ಕೃ.ಅಶ್ವತ್ಥನಾರಾಯಣರವರು | ಅಧ್ಯಕ್ಷರು |
| 2. | ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ.) | ಉಪಾಧ್ಯಕ್ಷರು |
| 3. | ಶ್ರೀ. ಟಿ.ಎಸ್.ಕೃಷ್ಣಮೂರ್ತಿರವರು (ಜರಿಕೃಷ್ಣ) | ನಿರ್ದೇಶಕರು |
| 4. | ಶ್ರೀ. ಆರ್.ಭಾಸ್ಕರ್‌ರವರು (ಗಿಣಿ) | ನಿರ್ದೇಶಕರು |
| 5. | ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ. ವಿ. ರಾಜು) | ನಿರ್ದೇಶಕರು |
| 6. | ಶ್ರೀ. ಎಸ್.ಉಮಾಶಂಕರ್‌ರವರು | ನಿರ್ದೇಶಕರು |
| 7. | ಶ್ರೀ. ಕುಲಾವಿ ಆರ್.ಮಲ್ಲಣ್ಣರವರು | ನಿರ್ದೇಶಕರು |
| 8. | ಶ್ರೀ. ಊರುಕೆರೆ ಜಿ.ದಯಾನಂದರವರು | ನಿರ್ದೇಶಕರು |
| 9. | ಶ್ರೀ. ಮಾಧವರವರು | ನಿರ್ದೇಶಕರು |
| 10. | ಶ್ರೀಮತಿ. ಹೆಚ್.ಪಾರ್ವತಿರವರು (ರಂಗನಾಯಕಿ) | ಮಹಿಳಾ ನಿರ್ದೇಶಕರು |
| 11. | ಶ್ರೀಮತಿ ಆರ್.ದೇವಕಿರವರು | ಮಹಿಳಾ ನಿರ್ದೇಶಕರು |
| 12. | ಶ್ರೀ. ಡಿ.ಹೆಚ್.ಜಗನ್ನಾಥ್‌ರವರು (ದೊಮ್ಮಸಂದ್ರ) | ನಿರ್ದೇಶಕರು (ಹಿಂ. ವರ್ಗ) |
| 13. | ಶ್ರೀ. ಪಿ.ದೇವರಾಜುರವರು | ನಿರ್ದೇಶಕರು (ಹಿಂ. ವರ್ಗ) |
| 14. | ಶ್ರೀ. ಪಿ.ಎಂ.ನಾಗರಾಜುರವರು | ನಿರ್ದೇಶಕರು (ಪ.ಜಾ/ಪ.ಪಂ) |
| 15. | ಶ್ರೀ. ಶಾಂತರಾಜುರವರು (ಬ್ಯಾಂಕಿಂಗ್ ಪರಿಣಿತರು) | ವೃತ್ತಿಪರ ನಿರ್ದೇಶಕರು |
| 16. | ಶ್ರೀ. ಜಿ.ಶಿವಕುಮಾರ್‌ರವರು (ಚಾರ್ಟರ್ಡ್ ಅಕೌಂಟೆಂಟ್) | ವೃತ್ತಿಪರ ನಿರ್ದೇಶಕರು |

## 2020–21ನೇ ಸಾಲಿನಲ್ಲಿ ನಡೆದ ನಿರ್ದೇಶಕ ಮಂಡಳಿಯ ಒಟ್ಟು ಸಭೆಗಳು – 15

### ಹಾಜರಾತಿ ವಿವರ

| | | | |
|---|---|---|---|
| 1. | ಶ್ರೀ. ಕೃ.ಅಶ್ವತ್ಥನಾರಾಯಣರವರು | – | 15 |
| 2. | ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ.) | – | 12 |
| 3. | ಶ್ರೀ. ಟಿ.ಎಸ್.ಕೃಷ್ಣಮೂರ್ತಿರವರು (ಜರಿಕೃಷ್ಣ) | – | 12 |
| 4. | ಶ್ರೀ. ಆರ್.ಭಾಸ್ಕರ್‌ರವರು (ಗಿಣಿ) | – | 13 |
| 5. | ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ. ವಿ. ರಾಜು) | – | 14 |
| 6. | ಶ್ರೀ. ಎಸ್.ಉಮಾಶಂಕರ್‌ರವರು | – | 14 |
| 7. | ಶ್ರೀ. ಕುಲಾವಿ ಆರ್.ಮಲ್ಲಣ್ಣರವರು | – | 15 |
| 8. | ಶ್ರೀ. ಊರುಕೆರೆ ಜಿ.ದಯಾನಂದರವರು | – | 14 |
| 9. | ಶ್ರೀ. ಮಾಧವರವರು | – | 15 |
| 10. | ಶ್ರೀಮತಿ. ಹೆಚ್.ಪಾರ್ವತಿರವರು (ರಂಗನಾಯಕಿ) | – | 15 |
| 11. | ಶ್ರೀಮತಿ ಆರ್.ದೇವಕಿರವರು | – | 13 |
| 12. | ಶ್ರೀ. ಡಿ.ಹೆಚ್.ಜಗನ್ನಾಥ್‌ರವರು (ದೊಮ್ಮಸಂದ್ರ) | – | 14 |
| 13. | ಶ್ರೀ. ಪಿ.ದೇವರಾಜುರವರು | – | 14 |
| 14. | ಶ್ರೀ. ಪಿ.ಎಂ.ನಾಗರಾಜುರವರು (ಪ.ಜಾ/ಪ.ಪಂ) | – | 14 |
| 15. | ಶ್ರೀ. ಶಾಂತರಾಜುರವರು (ಬ್ಯಾಂಕಿಂಗ್ ಪರಿಣಿತರು) | – | 14 |
| 16. | ಶ್ರೀ. ಜಿ.ಶಿವಕುಮಾರ್‌ರವರು (ಚಾರ್ಟರ್ಡ್ ಅಕೌಂಟೆಂಟ್) | – | 6 |

# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.**

## 2020–21ನೇ ಸಾಲಿನ ನಿರ್ದೇಶಕ ಮಂಡಳಿ ವರದಿ

ಮಾನ್ಯ ಸದಸ್ಯರೇ,

ನಮ್ಮ ಬ್ಯಾಂಕಿನ ಐವತ್ತೆಂಟನೆಯ ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆಗೆ ಆಗಮಿಸಿರುವ ತಮ್ಮೆಲ್ಲರನ್ನು ಬ್ಯಾಂಕಿನ ನಿರ್ದೇಶಕ ಮಂಡಳಿಯು ಹಾರ್ದಿಕವಾಗಿ ಸ್ವಾಗತಿಸುತ್ತದೆ.

ಏಪ್ರಿಲ್ 2021 ರ ಮಾಸದಲ್ಲಿ ನಮ್ಮ ಬ್ಯಾಂಕಿನ ಬ್ಯಾಂಕಿಂಗ್ ಪರಿಣಿತರು – ವೃತ್ತಿಪರ ನಿರ್ದೇಶಕರಾದ ಶ್ರೀ. ಶಾಂತರಾಜುರವರು ಹಾಗೂ ಬ್ಯಾಂಕಿನ ಹಿರಿಯ ಸಿಬ್ಬಂದಿಯಾದ ಶ್ರೀ. ಬಿ.ಕೆ.ಯದುನಂದನರವರುಗಳು ನಿಧನ ಹೊಂದಿರುತ್ತಾರೆ ಹಾಗೂ ವರದಿ ಸಾಲಿನಲ್ಲಿ ಈ ಕೆಳಕಂಡ ಬ್ಯಾಂಕಿನ ಸದಸ್ಯರುಗಳು ನಿಧನ ಹೊಂದಿದ್ದು, ಇವರುಗಳ ಆತ್ಮಕ್ಕೆ ಶಾಂತಿ ಲಭಿಸಲೆಂದು ಹಾಗೂ ಮೃತರ ಅಗಲಿಕೆಯಿಂದಾದ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ.

ಬ್ಯಾಂಕಿನ ಸದಸ್ಯರುಗಳಾದ ಆರ್.ರಾಮಕೃಷ್ಣ, ಎಸ್.ಪುಟ್ಟಣ್ಣ, ಪಿ.ಎಸ್.ಅರಸಿದ್ದ, ವೈ.ಎಸ್.ರೇವಣ್ಣ, ವೆಂಕೋಬಾ ಜಿ. ಕಾಂಬ್ಳೆ, ಬಿ.ಸೋಮಶೇಖರ್, ನಾಗರತ್ನ, ಎಂ.ಸಿ.ಕಾಂತರಾಜು, ಹೆಚ್.ಲೀಲಮ್ಮ, ಎಲ್.ಸೋಮಸುಂದರ್, ಆರ್.ಷಣ್ಮುಗಂ, ಎಸ್.ಮೋಹನ್‌ಕುಮಾರ್, ಹೆಚ್.ಎಂ.ಸಿದ್ದರಾಮಯ್ಯ, ಎಂ.ಬಿ.ಸೋಮಶೇಖರ್, ಎಸ್.ಎಂ.ಮಂಜುನಾಥ್, ಆರ್.ನಾಗರತ್ನಮ್ಮ, ಹೊನ್ನಮ್ಮ, ಎಸ್.ಕೃಷ್ಣ, ಟಿ.ರಂಗಸ್ವಾಮಿ, ಎಸ್.ವಿ.ರಾಮಕೃಷ್ಣ, ಪ್ರತಾಪ್ ವಿ.ಮಕಿಜ, ಆರ್.ಪರಪ್ಪ, ಸರಸ್ವತಮ್ಮ, ಆರ್.ಮಂಜುನಾಥ್ ರಾವ್, ಪಿ.ಪ್ರೇಮ, ಎಸ್.ಪ್ರಭಾಕರ್, ಎಸ್.ಹೇಮಾವತಿ, ಬಿ.ಎನ್.ಉಮೇಶ್ ಚಂದ್ರ, ಜಿ.ಶಿವರಾಮ, ಕೆ.ದೇವರಾಜು, ಶಾಂತಮ್ಮ, ಎಂ.ಅರ್ಧನಾರಿ, ಆರ್.ಭೋಜರಾಜ, ಎ.ಗೋಪಾಲರಾಜು, ಎನ್.ನೇತ್ರಾವತಿ, ಆರ್.ಪದ್ಮಾವತಿ, ಕೆ.ಎಂ.ರುಕ್ಮಿಣಿ, ಜಿ.ಯೋಗಚಂದ್ರಪ್ಪ, ಪಿ.ಚಿನ್ನಮ್ಮ, ಎಲ್.ರಾಜೇಶ್, ಪದ್ಮ, ಬಿ.ಹನುಮಂತರಾಜು, ಡಿ.ಆರ್.ರಾಮಲಿಂಗಮೂರ್ತಿ, ಜಿ.ರಾಜು, ಹೆಚ್.ರಾಜು, ವೈ.ಈಶ್ವರಯ್ಯ, ಎ.ಪಾಪಣ್ಣ, ಚಂದ್ರಮ್ಮ, ವಿ.ಶೇಷಾದ್ರಿ, ಎಲ್.ಮೋಹನ್, ಬಿ.ಎಸ್.ಪರಮೇಶ್ವರ, ಎಸ್.ವಿ.ಭಾಸ್ಕರ್, ಕೆ.ಲೋಕೇಶ್‌ಮೂರ್ತಿ, ಕೆ.ಜಿತೇಂದ್ರ ಕುಮಾರ್, ಆರ್.ಕೆ.ಮಂಗಳ ಗೌರಿ, ಸಿ.ಎನ್.ಕಾಂತರಾಜ್, ಪಿ.ಜಯರಾಮ್, ಎಸ್.ಸುಧಾಕರ್, ಪಿ.ಆನಂದ, ಪಿ.ರಾಜು, ಎಂ.ಪಿ.ನಾರಾಯಣ ಸಾ, ಗಂಗಣ್ಣ, ಕೆ.ಎನ್.ಶ್ಯಾಮ್‌ಸುಂದರ್, ಪಿ.ಲಕ್ಷ್ಮಿನಾರಾಯಣ, ಬಿ.ಸಿ.ರಂಗಸ್ವಾಮಿ, ಹೆಚ್.ಲೀಲಾವತಿ, ಜಿ.ಆರ್.ಪ್ರಕಾಶ್, ಎನ್.ವಿ.ರತ್ನಮ್ಮ, ಹೆಚ್.ತಿಮ್ಮಣ್ಣ, ನಾಗರತ್ನ, ಹೆಚ್.ಬಿ.ಭರತ್‌ಕುಮಾರ್, ಬಿ.ವಿ.ಸೋಮಶೇಖರ್, ಕೆ.ವೆಂಕಟೇಶ್, ಹೆಚ್.ಎಸ್.ಶಿವಶಂಕರ್, ಟಿ.ಎಲ್.ಶ್ರೀನಿವಾಸ್, ಕೆ.ಗಿರಿಜಮ್ಮ, ಆರ್.ಲಕ್ಷ್ಮಿನಾರಾಯಣ, ಆರ್.ಗೌರಮ್ಮ, ಜಿ.ವಿ.ಲಕ್ಷ್ಮಿ, ನಂಜಮ್ಮ, ಟಿ.ಗಿರಿಯಪ್ಪ, ಟಿ.ಎಲ್.ಚನ್ನಕೇಶವಮೂರ್ತಿ, ಜಿ.ಚಂದ್ರಪ್ಪ, ಕೆ.ವೈ.ತುಳಸಿರಾಮ್, ಎಂ.ಆರ್.ನಾರಾಯಣಪ್ಪ, ಎನ್.ನಾರಾಯಣ, ಪಿ.ಕೃಷ್ಣಪ್ಪ, ಎಂ.ಭೀಮೇಶ್ವರ, ಜಿ.ಸೋಮಶೇಖರ್, ಹೆಚ್.ಕೆ.ನಾಗರಾಜು, ಎಸ್.ಚಂದ್ರಶೇಖರ್, ಸಿ.ಶ್ರೀನಿವಾಸಮೂರ್ತಿ, ಸರೋಜಮ್ಮ, ಎಂ.ಮಹದೇವ, ವೈ.ಬಸವರಾಜು, ಅನ್ನಪೂರ್ಣಮ್ಮ, ಎಂ.ಆರ್.ಕೃಷ್ಣಸ್ವಾಮಿ, ಎನ್.ಆನಂದಮೂರ್ತಿ, ಕೆ.ಶಿವಶಂಕರ್, ಟಿ.ಚನ್ನಪ್ಪ, ಹೆಚ್.ಆಂಜನೇಯಮೂರ್ತಿ, ಕೆ.ಉಮಾದೇವಿ, ಲಕ್ಷ್ಮಿ, ಎ.ಲೋಕೇಶ್, ಹನುಮಕ್ಕ, ಸಿ.ಕುಮಾರ್, ಎಸ್.ಹೇಮಾವತಿ, ಟಿ.ಎಂ.ರಾಮಮೂರ್ತಿ, ತಿಮ್ಮದಾಸಪ್ಪ, ಅಕ್ಮಲ್, ಬಿ.ಬಸವರಾಜು, ಎಂ.ಕೃಷ್ಣಮೂರ್ತಿ, ಬಿ.ಎನ್.ಲಕ್ಷ್ಮಿದೇವಿ, ಜಿ.ಗಂಗಾಧರಪ್ಪ, ಆರ್.ಚನ್ನಪ್ಪ, ಕೆ.ಶಾರದಮ್ಮ, ಆರ್.ಭಾಸ್ಕರ್, ಆರ್.ಲೋಕೇಶ್, ಎನ್.ಸತ್ಯನಾರಾಯಣ, ವಿ.ಚಿನ್ನರಾಜು, ಕೆ.ರಾಜಣ್ಣ, ಎ.ಶಂಕರಪ್ಪ, ಚಂದ್ರಶೇಖರ್, ಎಸ್.ಎಂ.ಜಯಬಾಯಿ, ಬಿ.ಎಸ್.ಚಂದ್ರಶೇಖರ ಶೆಟ್ಟಿ, ಎಸ್.ವಸಂತಕುಮಾರ್, ಸಿ.ವಿ.ಲಕ್ಷ್ಮಿನಾರಾಯಣ, ಬಿ.ಚಂದ್ರಮ್ಮ, ಆರ್.ಕಾಂತರಾಜ್, ಎನ್.ವಾಸುದೇವ, ಜಿ.ಮೋಹನ್, ಟಿ.ಎಲ್.ಶ್ರೀನಿವಾಸಮೂರ್ತಿ, ಎ.ಮೈಲಾರಪ್ಪ, ಜಿ.ಇಂದ್ರಾಣಿ, ಎನ್.ಪಿ.ನಾರಾಯಣಪ್ಪ, ಬಿ.ಇ.ರಾಜು, ಆರ್.ಸಾವಿತ್ರಮ್ಮ,

ಸಿ.ಪದ್ಮನಾಭನ್, ಎಸ್.ದೇವರಾಜ, ವಿಜಯಲಕ್ಷ್ಮಿ, ಬಿ.ಎಸ್.ಲಕ್ಷ್ಮೀನಾರಾಯಣ, ಆರ್.ಪಿ.ಕೇಶವಮೂರ್ತಿ, ಎಂ.ತಿಮ್ಮರಾಜು, ಬಿ.ವಿ.ವೆಂಕಟೇಶ್, ಜೆ.ಹೆಚ್.ಪುರುಷೋತ್ತಮ, ಟಿ.ಆರ್.ರಂಗಧಾಮು, ಎಂ.ರಾಮಸ್ವಾಮಿ, ಪಿ.ಉಮಾಪತಿ, ಬಿ.ನಾಗರತ್ನಮ್ಮ, ರುಕ್ಮಾಂಗದ, ಕೆ.ಸಿ.ದಿವಾಕರ, ಎಲ್.ಎಸ್.ಸುಬ್ಬರಾಮಯ್ಯ, ಪಿ.ಪುಟ್ಟರಾಜು, ಪುಷ್ಪ ರಂಗಪ್ಪ, ಕೆ.ಮೋಹನ್, ವಿ.ಗೋವಿಂದಪ್ಪ, ಎಸ್.ಪ್ರಭಾಕರ್, ಸಿ.ಸರೋಜಮ್ಮ, ಆರ್.ಕೃಷ್ಣಪ್ಪ, ವನಜಮ್ಮ, ಎನ್.ರಾಮಚಂದ್ರಪ್ಪ, ಆರ್.ಮಹಾಲಕ್ಷ್ಮಿ, ಜಿ.ಹನುಮಂತಪ್ಪ, ವಿ.ಲಕ್ಷ್ಮಿನಾರಾಯಣ, ಎಂ.ಲಕ್ಷ್ಮಿನಾರಾಯಣ, ಪಿ.ಲೋಕೇಶ್, ವಿ.ಆರ್.ಆನಂದ್, ಪಿ.ಮಾರಿಮುತ್ತು, ರೇಣುಕ, ಆರ್.ಎಲ್.ರಾಮಚಂದ್ರ, ಎಸ್.ಸತ್ಯಮೂರ್ತಿ, ಎಂ.ಲಕ್ಷ್ಮಿನಾರಾಯಣ, ಎಂ.ಎಸ್.ರಾಜಣ್ಣ, ಆರ್.ಕೃಷ್ಣಪ್ರಸಾದ್, ಎ.ಲೋಗನಾಥನ್, ಎಂ.ವೆಂಕಟೇಶ್, ಕೆ.ರಾಜಣ್ಣ, ಹಂಸವೇಣಿ, ಎಸ್.ಎನ್.ವಿಜಯಲಕ್ಷ್ಮಿ, ಸಿ.ರಾಮಚಂದ್ರಪ್ಪ, ಡಿ.ವಿ.ನಾರಾಯಣ ರಾವ್, ಆರ್.ಭಾಗ್ಯಮ್ಮ, ಆರ್.ವೆಂಕಟೇಶ್, ಕೋಮಲ ಮೋಹನ್, ಲಕ್ಷ್ಮಮ್ಮ, ಎಸ್.ತಿಮ್ಮರಾಜು, ಎಲ್.ಎಸ್.ಸುಬ್ಬ ಜಯರಾಮ್, ಗೋಪಿ ಲಕ್ಷ್ಮಿ ಇವರುಗಳ ನಿಧನಕ್ಕೆ ಗೌರವ ಸೂಚಿಸಲು ಒಂದು ನಿಮಿಷ ಮೌನವನ್ನಾಚರಿಸಿ ಮೃತರುಗಳ ಆತ್ಮಕ್ಕೆ ಶಾಂತಿಯನ್ನು ಕೋರೋಣವೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಬ್ಯಾಂಕಿನ ವಾರ್ಷಿಕ ವರದಿ 31ನೇಯ ಮಾರ್ಚ್ 2021ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದ ಪರಿಶೋಧಿಸಿದ ಆಸ್ತಿ ಹೊಣೆ ಪಟ್ಟಿ ಹಾಗೂ ಲಾಭ-ನಷ್ಟದ ತಃಖ್ತೆಯನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ಸನ್ಮಾನ್ಯ ಸದಸ್ಯರ ಮುಂದಿಡಲು ಇಚ್ಛಿಸುತ್ತೇವೆ.

**ಬ್ಯಾಂಕಿನ ವ್ಯವಹಾರಿಕ ನಿರ್ವಹಣೆ:**

ನಮ್ಮ ಬ್ಯಾಂಕು 2020-21ನೇ ಸಾಲಿನಲ್ಲಿ ಠೇವಣಿ ಸಂಗ್ರಹದಲ್ಲಿ ಶೇ.9.79 ರಷ್ಟು ಹೆಚ್ಚಾಗಿದೆ. ಸಾಲ ಮತ್ತು ಮುಂಗಡಗಳಲ್ಲಿ ಶೇ.6.48 ರಷ್ಟು ಹೆಚ್ಚಾಗಿದೆ. ನಮ್ಮ ಬ್ಯಾಂಕಿನ ಪ್ರಸಕ್ತ ಸಾಲಿನ ಠೇವಣಿ ಹಾಗೂ ಸಾಲ ಮತ್ತು ಮುಂಗಡಗಳ ಅನುಪಾತ ಶೇ.59.96 ರಷ್ಟಿದೆ.

**2020-21ನೇ ಸಾಲಿನ ವಹಿವಾಟಿನ ವಿವರ.**

(ರೂ ಲಕ್ಷಗಳಲ್ಲಿ)

| ವಿವರ | 31.03.2020 | 31.03.2021 | ಶೇಕಡವಾರು |
|---|---|---|---|
| ಒಟ್ಟು ಠೇವಣಿ | 28795.53 | 31627.85 | 9.83 |
| ಸಾಲ ಮತ್ತು ಮುಂಗಡಗಳು | 17809.42 | 18965.38 | 6.48 |
| ಲಾಭ | 326.94 | 162.60 | (44.76) |
| ನಿವ್ವಳ ಲಾಭ | 227.97 | 58.55 | (74.32) |
| ದುಡಿಯುವ ಬಂಡವಾಳ | 33431.59 | 36551.69 | 9.33 |
| ಸಿಆರ್ಎಆರ್ | ಶೇ.17.68 | ಶೇ.16.67 | (5.71) |
| ಒಟ್ಟು ಆಸ್ತಿಯ ಮೇಲಿನ ಗಳಿಕೆ | ಶೇ.9.99 | ಶೇ.9.70 | (2.80) |
| ಕಾಸ್ಟ್ ಆಫ್ ಫಂಡ್ | ಶೇ.6.77 | ಶೇ.6.54 | (3.40) |
| ಒಟ್ಟು ಸಿಬ್ಬಂದಿ | 91 | 90 | 1.10 |

**ಪ್ರಸಕ್ತ ವರ್ಷದ ಲಾಭ:**

ನಮ್ಮ ಬ್ಯಾಂಕು 2020-21ನೇ ಸಾಲಿನಲ್ಲಿ ಸಾಲ ನೀಡಿಕೆ ಗುರಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿ ಬಡ್ಡಿ ಆದಾಯವನ್ನು ವೃದ್ಧಿಸಿಕೊಂಡಿರುತ್ತದೆ. ನಂತರ ಜನವರಿ 2019ರಿಂದ ಜಾರಿಗೆ ಬರುವಂತೆ ಸಿಬ್ಬಂದಿ ವರ್ಗದವರಿಗೆ

ಕರ್ನಾಟಕ ಸರ್ಕಾರದ 6ನೇ ವೇತನ ಆಯೋಗದ ವೇತನ ಶ್ರೇಣಿ ಜಾರಿಗೊಳಿಸಿ ಸುಮಾರು ಒಂದು ಕೋಟಿ ರೂಗಳಷ್ಟು ಹೆಚ್ಚುವರಿ ಖರ್ಚನ್ನು ಭರಿಸಿದ್ದೇವೆ. ಈ ಸಂದರ್ಭದಲ್ಲಿಯೂ ಸಹ ನಮ್ಮ ಬ್ಯಾಂಕು ರೂ.58.55 ಲಕ್ಷ ನಿವ್ವಳ ಲಾಭವನ್ನು ದಾಖಲಿಸಿದೆ.

**ಲಾಭಾಂಶ :**

ಕಳೆದ 2019–20ನೇ ಸಾಲಿನಲ್ಲಿ ಕೋವಿಡ್–19ರ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶನದಂತೆ ಸದಸ್ಯರುಗಳಿಗೆ ಡಿವಿಡೆಂಡ್ ನೀಡಲು ಸಾಧ್ಯವಾಗಿರುವುದಿಲ್ಲ. ನಂತರ 2020–21ನೇ ಸಾಲಿಗೆ ಸಂಬಂಧಿಸಿದಂತೆ ಲೆಕ್ಕ ಪತ್ರಗಳ ವಿವರಣೆಯನ್ನು ಸಾಮಾನ್ಯ ಸಭೆಗೆ ಈಗ ಮಂಡಿಸಿ ಒಪ್ಪಿಗೆಯನ್ನು ಪಡೆಯುತ್ತಿದ್ದೇವೆ. 2020–21ನೇ ಸಾಲಿನ ಒಟ್ಟಾರೆ ವಹಿವಾಟಿನ ವಿವರವನ್ನು ಮೇಲೆ ತಿಳಿಸಿರುವಂತೆ ನಿರ್ದೇಶಕ ಮಂಡಳಿಯಲ್ಲಿ ಸವಿಸ್ತಾರವಾದ ಚರ್ಚೆಯ ನಂತರ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂ. DOR.NO.BP.BC/3/ 21.04.048/2020-21 dtd. 06.08.2020 ರ ಮಾರ್ಗಸೂಚಿಯಂತೆ ಪುನರ್ ನಿಗಧಿಗೊಳಿಸಲಾದ ಸಾಲದ ಖಾತೆಗಳಿಗೆ ಹಾಗೂ ಮೊರಟೋರಿಯಂ ಸೌಲಭ್ಯ ಕಲ್ಪಿಸಲಾದ ಸಾಲದ ಖಾತೆಗಳಿಗೆ ಶೇ.10 ರಷ್ಟು ನಿಧಿಯನ್ನು ಕಾಯ್ದಿರಿಸಬೇಕಾಗಿದ್ದರಿಂದಾಗಿ ಸದರಿ ಸೂಚನೆಯನ್ನು ಪಾಲಿಸಿ BDDR ಗೆ ಕಾಯ್ದಿರಿಸಲಾದ್ದರಿಂದ ಈ ಸಾಲಿಗೆ ಉಳಿದ ಲಾಭಾಂಶದಿಂದ ನಿರ್ದೇಶಕ ಮಂಡಳಿಯು 2020–21ನೇ ಸಾಲಿಗೆ ಶೇ.6 ರಂತೆ ಲಾಭಾಂಶ ನೀಡಲು ಶಿಫಾರಸ್ಸು ಮಾಡಿರುತ್ತದೆ.

ಸಹೃದಯ ಸದಸ್ಯರು ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಈ ಪ್ರಸ್ತಾವನೆಗೆ ಅನುಮೋದನೆ ನೀಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

**ಸದಸ್ಯತ್ವ ಮತ್ತು ಷೇರು ಬಂಡವಾಳದ ಪ್ರಗತಿಯ ನೋಟ :**

2020–21ನೇ ಸಾಲಿನಲ್ಲಿ 6.53 ಕೋಟಿಯಷ್ಟು ಷೇರು ಬಂಡವಾಳವಿದ್ದು ನಮ್ಮ ಅಧಿಕೃತ ಬಂಡವಾಳ ಬೈಲಾ ಪ್ರಕಾರ ರೂ.20.00 ಕೋಟಿಯಷ್ಟಿದ್ದು, ಬ್ಯಾಂಕಿನ ಪ್ರಗತಿ ಮತ್ತು ವ್ಯವಹಾರದ ಬೆಳವಣಿಗೆ ಗಮನಕ್ಕೆ ತೆಗೆದುಕೊಂಡು ಅಧಿಕೃತ ಬಂಡವಾಳವನ್ನು ರೂ.20.00 ಕೋಟಿಗೆ 2012–13ನೇ ಸಾಲಿನ ಸಾಮಾನ್ಯ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ನಿಗಧಿಪಡಿಸಲಾಯಿತು. ಪ್ರಸಕ್ತ ಸಾಲಿಗೂ ಈ ನಿರ್ಣಯವನ್ನು ಜಾರಿಯಿಡಲು ತೀರ್ಮಾನಿಸಲಾಗಿ ತಮ್ಮ ಅನುಮತಿಗಾಗಿ ಮಂಡಿಸುತ್ತಿದ್ದೇವೆ.

**ಸದಸ್ಯತ್ವ :**

| ವಿವರ | | ವರ್ಷದ ಪ್ರಾರಂಭ ದಲ್ಲಿದ್ದ ಸದಸ್ಯರು | ವರದಿ ಸಾಲಿನಲ್ಲಿ ಸೇರ್ಪಡೆಯಾದ ಸದಸ್ಯರು | ವರದಿ ಸಾಲಿನಲ್ಲಿ ಸದಸ್ಯತ್ವ ಹಿಂದಕ್ಕೆ ಪಡೆದವರು | ವರದಿ ಸಾಲಿನ ಆಖೈರಿಗೆ ಇರುವ ಸದಸ್ಯರು | ಒಟ್ಟು |
|---|---|---|---|---|---|---|
| **2017–2018** | ಖಾಯಂ ಸದಸ್ಯರು | 16355 | 77 | 5 | 16427 | 18794 |
| | ಸಹ ಸದಸ್ಯರು | 2357 | 25 | 15 | 2367 | |
| **2018–2019** | ಖಾಯಂ ಸದಸ್ಯರು | 16427 | 591 | 136 | 16882 | 19348 |
| | ಸಹ ಸದಸ್ಯರು | 2367 | 225 | 126 | 2466 | |
| **2019–2020** | ಖಾಯಂ ಸದಸ್ಯರು | 16882 | 603 | 143 | 17342 | 19933 |
| | ಸಹ ಸದಸ್ಯರು | 2466 | 196 | 71 | 2591 | |
| **2020–2021** | ಖಾಯಂ ಸದಸ್ಯರು | 17342 | 343 | 189 | 17496 | 20081 |
| | ಸಹ ಸದಸ್ಯರು | 2591 | 65 | 71 | 2585 | |

**ಪಾವತಿಯಾದ ಷೇರು ಬಂಡವಾಳ :**

(ರೂ ಲಕ್ಷಗಳಲ್ಲಿ)

| ವಿವರ | | ಸಾಲು ಪ್ರಾರಂಭಕ್ಕೆ | ಸಾಲಿನಲ್ಲಿ ಸೇರ್ಪಡೆ | ಸಾಲಿನಲ್ಲಿ ವಾಪಸಾತಿ | ಸಾಲಾ ಖೈರಿಗೆ ಉಳಿಕೆ | ಒಟ್ಟು ಷೇರು ಬಂಡವಾಳ |
|---|---|---|---|---|---|---|
| **2017–2018** | ಖಾಯಂ ಸದಸ್ಯರು | 484.35 | 9.96 | 12.76 | 481.55 | 793.05 |
| | ಸಹ ಸದಸ್ಯರು | 326.46 | 3.31 | 18.27 | 311.50 | |
| **2018–2019** | ಖಾಯಂ ಸದಸ್ಯರು | 481.55 | 22.53 | 36.15 | 467.93 | 726.31 |
| | ಸಹ ಸದಸ್ಯರು | 311.50 | 9.80 | 62.92 | 258.38 | |
| **2019–2020** | ಖಾಯಂ ಸದಸ್ಯರು | 467.93 | 14.26 | 39.34 | 442.85 | 673.08 |
| | ಸಹ ಸದಸ್ಯರು | 258.38 | 1.81 | 29.96 | 230.23 | |
| **2020–2021** | ಖಾಯಂ ಸದಸ್ಯರು | 442.85 | 7.89 | 14.66 | 436.08 | 652.76 |
| | ಸಹ ಸದಸ್ಯರು | 230.23 | 0.54 | 14.10 | 216.67 | |

**ಆಪದ್ಧನ ನಿಧಿ ಮತ್ತು ಇತರೇ ನಿಧಿಗಳು :**

ನಮ್ಮ ಬ್ಯಾಂಕಿನ ಆಪದ್ಧನ ನಿಧಿ ಮತ್ತು ಇತರೇ ನಿಧಿಗಳು ವರದಿ ಸಾಲಿನ ಆರಂಭದಲ್ಲಿ ರೂ.32.12 ಕೋಟಿಗಳಿದ್ದು, ಸಾಲಾಂತ್ಯಕ್ಕೆ ರೂ.36.80 ಕೋಟಿಗಳಿಗೆ ಏರಿದ್ದು ಈ ವೃದ್ಧಿಯು ಶೇ.14.57 ರಷ್ಟಾಗಿರುತ್ತದೆ.

**ಠೇವಣಿಗಳು ಮತ್ತು ದುಡಿಯುವ ಬಂಡವಾಳ :**

ಕಳೆದ ಮೂರು ಸಾಲಿನ ಠೇವಣಿಗಳ ಮತ್ತು ದುಡಿಯುವ ಬಂಡವಾಳದ ತುಲನಾತ್ಮಕ ಅಂಕಿ ಅಂಶಗಳು ಕೆಳಕಂಡಂತಿವೆ:

**(ರೂ. ಕೋಟಿಗಳಲ್ಲಿ)**

| ವಿವರ | 31.03.2019 | 31.03.2020 | 31.03.2021 |
|---|---|---|---|
| ಠೇವಣಾತಿಗಳು | 280.85 | 287.96 | 316.28 |
| ದುಡಿಯುವ ಬಂಡವಾಳ | 326.93 | 333.52 | 365.52 |

ಬ್ಯಾಂಕು ಗ್ರಾಹಕರ ಠೇವಣಿಗಳಿಗೆ ನೀಡುವ ಬಡ್ಡಿ ದರವು ಆಕರ್ಷಕವಾಗಿದ್ದು ಎಲ್ಲಾ ವರ್ಗದ ಗ್ರಾಹಕರುಗಳಿಗೆ ಅನುಕೂಲ ಮಾಡಲಾಗಿದೆ. ಹಿರಿಯ ನಾಗರೀಕರಿಗೆ ಸಾಮಾನ್ಯ ಬಡ್ಡಿದರದ ಮೇಲೆ ಶೇ.0.50 ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ. ನೊಂದಾಯಿತ ಸಂಘ ಸಂಸ್ಥೆಗಳಿಗೆ ಸಾಮಾನ್ಯ ಬಡ್ಡಿದರದ ಮೇಲೆ ಶೇ.0.50 ರಷ್ಟು ಹೆಚ್ಚಿನ ಬಡ್ಡಿಯನ್ನು 06 ತಿಂಗಳ ಮೇಲ್ಪಟ್ಟ ಅವಧಿಯ ಠೇವಣಿಗಳಿಗೆ ನೀಡಲಾಗುತ್ತಿದೆ. **ಎಲ್ಲಾ ರೀತಿಯ ಠೇವಣಿಗಳು ವಿಮೆ ಸೌಲಭ್ಯಕ್ಕೊಳಪಟ್ಟಿರುತ್ತವೆ. ಠೇವಣಿಗಳಿಗೆ ರೂ.5.00 ಲಕ್ಷದವರೆಗೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚಿತ ವಿಮಾ ಕಂಪನಿ ಡಿಐಸಿಜಿಸಿಯ ಮೂಲಕ ವಿಮೆ ಭದ್ರತೆ ಮಾಡಲಾಗಿರುತ್ತದೆ.** ಸದರಿ ವಿಮೆ ಕಂತನ್ನು ಬ್ಯಾಂಕು ತನ್ನ ಸ್ವಂತ ಖರ್ಚಿನಲ್ಲಿಯೇ ಭರಿಸುತ್ತಿದೆ.

ಆದಾಯ ತೆರಿಗೆ ಇಲಾಖೆಯ ಆದೇಶದ ಪ್ರಕಾರ ಗ್ರಾಹಕರಿಗೆ ನೀಡುವ ಠೇವಣಿಗಳ ಬಡ್ಡಿಯ ಮೂಲದಲ್ಲಿಯೇ TDS ಕಟಾವು ಮಾಡಲಾಗುತ್ತಿದೆ.

**ಸಾಲ ಮತ್ತು ಮುಂಗಡಗಳು :**

ಬ್ಯಾಂಕು ವಿವಿಧ ಉದ್ದೇಶಗಳಿಗೆ ಸದಸ್ಯರುಗಳಿಗೆ ಸಾಲ ನೀಡಲಾಗುತ್ತಿದೆ. ಈ ಸಾಲಗಳಿಗೆ ಸಾಕಷ್ಟು ಭದ್ರತೆಯನ್ನು ಸದಸ್ಯರುಗಳಿಂದ ಪಡೆಯಲಾಗುತ್ತಿದೆ.

ಮಗ್ಗಗಳನ್ನು / ಹುರಿಮಿಷನ್ ಯಂತ್ರಗಳನ್ನು ಬ್ಯಾಂಕಿಗೆ ಈಡು ಮಾಡಿಕೊಂಡು ಸದಸ್ಯರುಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸುಲಭ ಕಂತುಗಳಲ್ಲಿ ಪಾವತಿ ಮಾಡುವಂತೆ ಸಾಲ ನೀಡಲಾಗುತ್ತಿದೆ. ಈ ಸಾಲಗಳಿಗೆ ಯಂತ್ರಗಳನ್ನಲ್ಲದೆ ಇತರೇ ಭದ್ರತೆಯನ್ನು ಪಡೆದುಕೊಳ್ಳಲಾಗುತ್ತಿದೆ.

ಸದಸ್ಯರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಶೇಕಡ 8.50 ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆ ಬ್ಯಾಂಕಿನಲ್ಲಿ ಲಭ್ಯವಿದ್ದು ಗರಿಷ್ಠ ಮೊತ್ತ ರೂ.5 ಲಕ್ಷದವರೆಗೂ ಸಾಲ ಪಡೆಯಬಹುದು.

**ನೇಕಾರರ ಸಾಲ ಮನ್ನಾ ಯೋಜನೆ:**

**ಕರ್ನಾಟಕ ಸರ್ಕಾರ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಪಡೆದ ಸಾಲಗಳ ಮೊತ್ತದಲ್ಲಿ ರೂ.1.00 ಲಕ್ಷಗಳವರೆಗೆ ಮನ್ನಾ ಮಾಡುವುದಾಗಿ ಘೋಷಿಸಿ, ದಿ:02.08.2019ರಂದು ಸರ್ಕಾರಿ ಆದೇಶ ಸಂಖ್ಯೆ:ವಾಕೈ/ಜಕೈಯೋ/2019ರ ಮೂಲಕ ಹೊರಡಿಸಲಾದ ಆದೇಶದ ಅನುಸಾರ ನಮ್ಮ ಬ್ಯಾಂಕಿನಲ್ಲಿ ನೇಕಾರಿಕೆ ಉದ್ದೇಶಕ್ಕಾಗಿ ಸಾಲ ಪಡೆದ 367 ಮಂದಿ ನೇಕಾರ ಸದಸ್ಯರುಗಳ ಕ್ಲೇಮ್ ಬಿಲ್ಲನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದಿಂದ ಬಿಡುಗಡೆಗೊಂಡ ರೂ.2,84,62,268/–ಗಳ ಮೊತ್ತವನ್ನು ನೇಕಾರ ಸದಸ್ಯ ಫಲಾನುಭವಿಗಳಿಗೆ ತಲುಪಿಸಿದ್ದು, ಹಾಗೂ ಸದರಿ ಸರ್ಕಾರಿ ಆದೇಶಕ್ಕೆ ಮುಂದುವರೆದಂತೆ ದಿನಾಂಕ : 01.01.2019 ರಿಂದ 31.03.2019ರ ವರೆಗೆ ಪಾವತಿಸಿರುವ ಸಾಲದ ಮೊತ್ತವನ್ನು ಸರ್ಕಾರ ಪಾವತಿಸುವ ಬಗ್ಗೆ ಆದೇಶದಲ್ಲಿ ಉಲ್ಲೇಖವಿದ್ದು, ಇದಕ್ಕೆ ಸಂಬಂಧಪಟ್ಟಂತೆ ಬ್ಯಾಂಕಿನಿಂದ 226 ಫಲಾನುಭವಿಗಳ ರೂ.37,05,736/– ಮೊತ್ತದ ಕ್ಲೈಂ ಬಿಲ್‌ನ್ನು ಹಾಗೂ ಇದಲ್ಲದೆ ನೇಕಾರಿಕೆಗೆ ಪೂರಕವಾಗಿ ಹುರಿಮಿಷಿನ್ ಮತ್ತು ಡೈಯಿಂಗ್ ಉದ್ಯಮ ನಡೆಸಲು ಸಾಲ ಪಡೆದಿದ್ದ ಸದಸ್ಯರುಗಳಿಗೂ ಸಹ ಸದರಿ ಸಾಲ ಮನ್ನಾ ಯೋಜನೆಯ ಅನುಕೂಲವನ್ನು ನೀಡಬೇಕೆಂಬ ಬಗ್ಗೆ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ, ಈ ಸಂಬಂಧ 32 ಜನ ಫಲಾನುಭವಿಗಳು ರೂ. 32.00 ಲಕ್ಷಗಳ ಕ್ಲೈಂ ಬಿಲ್‌ನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದಿಂದ ಬಿಡುಗಡೆಗೊಂಡ ಒಟ್ಟು ರೂ. 69,05,736/– ಗಳನ್ನು ಸಂಬಂಧಪಟ್ಟ ಫಲಾನುಭವಿಗಳಿಗೆ ತಲುಪಿಸಲಾಗಿರುತ್ತದೆ. ಇದು ಬ್ಯಾಂಕಿಗೆ ಹೆಮ್ಮೆಯ ವಿಷಯವಾಗಿರುತ್ತದೆ. ಈ ಬಗ್ಗೆ ಫಲಾನುಭವಿ ನೇಕಾರ ಸದಸ್ಯರುಗಳು ಕೊರೊನಾ ವೈರಾಣು ಸಮಸ್ಯೆಯಿಂದ ನೇಕಾರಿಕೆ ಉದ್ಯಮ ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿದ್ದಂತಹ ಸಂದರ್ಭದಲ್ಲಿ ಬ್ಯಾಂಕು ಸರ್ಕಾರದಿಂದ ಸಾಲಮನ್ನಾ ಪರಿಹಾರ ದೊರಕಿಸಿಕೊಟ್ಟ ಬಗ್ಗೆ ಬ್ಯಾಂಕಿಗೆ ಅಭಿನಂದನೆಯನ್ನು ಸಲ್ಲಿಸಿರುತ್ತಾರೆ.**

**ನೇಕಾರಿಕೆಯ ಸಾಲ :**

ಶೇ.1 ಹಾಗೂ ಶೇ.3 ರ ಬಡ್ಡಿದರದಲ್ಲಿ ಬ್ಯಾಂಕಿನಿಂದ ನೀಡಲಾದ ಸಾಲಗಳಿಗೆ ವರದಿ ಸಾಲಿನಲ್ಲಿ ಸರ್ಕಾರದಿಂದ ರೂ.38.32 ಲಕ್ಷ ಬಡ್ಡಿ ಸಹಾಯ ಧನವು ಬ್ಯಾಂಕಿಗೆ ಬರಬೇಕಾಗಿದ್ದು, ಆ ಪೈಕಿ ರೂ.20.15 ಲಕ್ಷ ಪ್ರಸಕ್ತ ಸಾಲಿನಲ್ಲಿ ಬಂದಿದ್ದು, ಬಾಕಿ ರೂ.18.17 ಲಕ್ಷಗಳು ಬರಬೇಕಾಗಿರುತ್ತದೆ. ಸರ್ಕಾರದ ಆದೇಶದ ನಂತರ ಶೇ.1 ಹಾಗೂ ಶೇ.3ರ ಬಡ್ಡಿದರದ ನೇಕಾರಿಕೆ ಸಾಲ ನೀಡಿಕೆಯನ್ನು ಪ್ರಸಕ್ತ ಸಾಲಿನಲ್ಲಿಯೂ ಸಹ ಮುಂದುವರೆಸಲಾಗಿರುತ್ತದೆ. ಸದರಿ ಸೌಲಭ್ಯವನ್ನು ರೇಷ್ಮೆ ಹುರಿ ಮಾಡುವವರಿಗೆ ಮತ್ತು ರೇಷ್ಮೆ ಬಣ್ಣ ಮಾಡುವಂತಹ ಸದಸ್ಯರುಗಳಿಗೂ ಸಹ ವಿಸ್ತರಿಸಲಾಗಿರುತ್ತದೆ. ಸದರಿ ಸಾಲಗಳಿಗೆ ಬ್ಯಾಂಕಿನಿಂದ ವಿಧಿಸುವ ಸೇವಾ ಶುಲ್ಕವನ್ನು ಶೇ.50 ರಷ್ಟು ಕಡಿಮೆಗೊಳಿಸಿರುತ್ತದೆ.

**ಕರ್ನಾಟಕ ಸರ್ಕಾರ ಜವಳಿ ಇಲಾಖೆಯವರು ನೇಕಾರಿಕೆಗೆ ನೀಡುವ ಸಹಾಯಧನ (Subsidy) :**

ನೇಕಾರರ ವಿವಿಧ ಸಂಘಗಳ ಪ್ರಯತ್ನದ ಫಲವಾಗಿ ಕರ್ನಾಟಕ ಸರ್ಕಾರವು ಸಣ್ಣ ಮತ್ತು ಗುಡಿ ನೇಕಾರಿಕೋದ್ಯಮದ ಪ್ರಗತಿಗಾಗಿ ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ನೇಕಾರರಿಗೆ ಎರಡು ಮಗ್ಗಗಳ ಘಟಕ ಸ್ಥಾಪಿಸಲು ಪ್ರೋತ್ಸಾಹ ನೀಡುವ ದಿಸೆಯಲ್ಲಿ ಸರ್ಕಾರವು ಒಂದು ಮಗ್ಗಕ್ಕೆ ಬೇಕಾಗುವ ವೆಚ್ಚವನ್ನು ಉಚಿತವಾಗಿ ಭರಿಸಿ ಮತ್ತೊಂದು ಮಗ್ಗಕ್ಕೆ ಸಹಕಾರಿ ಬ್ಯಾಂಕುಗಳ ಮೂಲಕ ಸಾಲದ ರೂಪವಾಗಿ ನೀಡುವ ಯೋಜನೆ, ಅದೇ ರೀತಿ ಗಣಕೀಕೃತ ಜಾಕಾರ್ಡ್ ಖರೀದಿಸಲು ಶೇ.50ರಷ್ಟು ಮೊತ್ತ

ಸಹಾಯಧನ ನೀಡಿ ಉಳಿದ ಶೇ.50ರಷ್ಟು ಮೊತ್ತವನ್ನು ಸಹಕಾರ ಬ್ಯಾಂಕುಗಳ ಮೂಲಕ ಸಾಲದ ರೂಪವಾಗಿ ನೀಡುವ ಯೋಜನೆಗಳಡಿಯಲ್ಲಿ ನಮ್ಮ ಬ್ಯಾಂಕು 2020–21ನೇ ಸಾಲಿನಲ್ಲಿ ಮಗ್ಗಗಳ ಘಟಕ ಸ್ಥಾಪಿಸಲು ಮತ್ತು ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಸಲು ಒಟ್ಟು 3 ಸದಸ್ಯರಿಗೆ ರೂ. 10,50,000/– ಗಳ ಸಾಲವನ್ನು ನೀಡಲಾಗಿದ್ದು, ಹಾಗೂ 2020–21ನೇ ಸಾಲಿನಲ್ಲಿ ಸರ್ಕಾರದ ಬಡ್ಡಿ ರಿಯಾಯಿತಿ ಯೋಜನೆಯಲ್ಲಿ ಶೇ.1ರ ಬಡ್ಡಿ ದರದಲ್ಲಿ 94 ಜನ ಸದಸ್ಯರಿಗೆ ರೂ. 1,53,95,000/– ಗಳು ಮತ್ತು ಶೇ. 3ರ ಬಡ್ಡಿ ದರದಲ್ಲಿ 111 ಸದಸ್ಯರಿಗೆ ರೂ. 4,21,34,000/– ಗಳ ಒಟ್ಟು 205 ಸದಸ್ಯರಿಗೆ ಒಟ್ಟು ರೂ. 5,75,29,000/– ಗಳ ನೇಕಾರಿಕೆ ಸಾಲಗಳನ್ನು ಮಂಜೂರು ಮಾಡಲಾಗಿದೆ. ಇದಕ್ಕಾಗಿ ಈ ಯೋಜನೆಯಡಿ ವಿದ್ಯುತ್ ಮಗ್ಗಗಳನಲ್ಲದೆ ಇತರೇ ಭದ್ರತೆಯನ್ನು ಸಹ ಪಡೆಯಲಾಗಿದೆ.

**ಇ. ಎಂ. ಐ. ಬಡ್ಡಿದರದ ಸಾಲ ಯೋಜನೆ :**

| ಸಾಲದ ವಿಧ | ಬಡ್ಡಿ ದರ | ಸಾಲದ ಅವಧಿ |
|---|---|---|
| ಸ್ಥಿರಾಸ್ತಿ ಅಡಮಾನ ಸಾಲ – ಯಂತ್ರೋಪಕರಣ ಸಾಲ / ಇತರೇ ಉದ್ದೇಶಗಳಿಗೆ | ಶೇ.11.50 | 60/120/180 ತಿಂಗಳುಗಳು |
| ಗೃಹಸಾಲ | ಶೇ.10.50 | 60/120/180 ತಿಂಗಳುಗಳು |
| ವಾಹನ ಸಾಲ ದ್ವಿಚಕ್ರ | ಶೇ.11.70 | 36 ತಿಂಗಳುಗಳು |
| ವಾಹನ ಸಾಲ ನಾಲ್ಕು ಚಕ್ರ | ಶೇ.11.50 | 60 ತಿಂಗಳುಗಳು |

**ಎನ್.ಇ.ಎಫ್.ಟಿ. / ಆರ್.ಟಿ.ಜಿ.ಎಸ್. ಸೌಲಭ್ಯ :**

ಎನ್.ಇ.ಎಫ್.ಟಿ./ಆರ್.ಟಿ.ಜಿ.ಎಸ್. ಮೂಲಕ ತಾವು ಇಚ್ಛಿಸುವಂತಹ ಇತರೇ ಬ್ಯಾಂಕುಗಳ ಖಾತೆದಾರರಿಗೆ ತಮ್ಮ ಹಣವನ್ನು ಕೂಡಲೇ ವರ್ಗಾಯಿಸುವ ಸೌಲಭ್ಯ ಹಾಗೂ ಇತರೇ ಬ್ಯಾಂಕುಗಳಿಂದ ಖಾತೆದಾರರು ತಮ್ಮ ಖಾತೆಗಳಿಗೆ ಹಣವನ್ನು ಜಮಾ ಪಡೆಯುವ ನೇರ ಸೌಲಭ್ಯವನ್ನು (HOST TO HOST SYSTEM) ಒದಗಿಸಲಾಗಿದೆ. ಈ ಸೌಲಭ್ಯಕ್ಕಾಗಿ IFSC ಕೋಡ್ ಸಂಖ್ಯೆಯನ್ನು ಎಲ್ಲಾ ಶಾಖೆಗಳಿಗೂ ಪ್ರತ್ಯೇಕವಾಗಿ ಪಡೆದುಕೊಳ್ಳಲಾಗಿರುತ್ತದೆ. ಮಾನ್ಯ ಸದಸ್ಯರುಗಳು ಸದರಿ ಸೇವೆಯನ್ನು ಉಪಯೋಗಿಸಿಕೊಳ್ಳಲು ಈ ಮೂಲಕ ಕೋರಿದೆ.

**ಅನುತ್ಪಾದಕ ಸಾಲಗಳು :**

ನಿರ್ದೇಶಕ ಮಂಡಳಿಯು ಅನುತ್ಪಾದಕ ಸಾಲದ ವಸೂಲಾತಿಗಾಗಿ ಕ್ರಮವಿಟ್ಟಿದ್ದು ಹಾಗೂ ಅದರ ಪ್ರಮಾಣವನ್ನು ಕಡಿಮೆಗೊಳಿಸಲು ವಸೂಲಾತಿಯ ಕ್ರಮವನ್ನು ಬಲಪಡಿಸಲು ಸೂಕ್ತ ಕ್ರಮ ಕೈಗೊಂಡಿದೆ. ಬ್ಯಾಂಕಿನ ಅನುತ್ಪಾದಕ ಸಾಲದ ವಿವರ ಇಂತಿದೆ. ಕೋವಿಡ್–19ರ ಪರಿಣಾಮ ಅನುತ್ಪಾದಕ ಸಾಲದ ಮೊತ್ತ ಹೆಚ್ಚಾಗಿರುತ್ತದೆ.

(ರೂ ಲಕ್ಷಗಳಲ್ಲಿ)

| ವಿವರ | 2019 | 2020 | 2021 |
|---|---|---|---|
| ಅನುತ್ಪಾದಕ ಆಸ್ತಿಯ ಮೊತ್ತ | 588.78 | 574.27 | 944.77 |
| ನಿವ್ವಳ ಅನುತ್ಪಾದಕ ಆಸ್ತಿಯ ಮೊತ್ತ | –341.50 | –384.82 | –432.23 |
| ಶೇಕಡವಾರು ಅನುತ್ಪಾದಕ ಆಸ್ತಿಯ ಪ್ರಮಾಣ | 4.60% | 3.22% | 4.98% |
| ಶೇಕಡವಾರು ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ | –2.88% | –2.28% | –2.13% |

**ಬ್ಯಾಂಕಿನ ಸಿಬ್ಬಂದಿಗಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮ :**

ಬ್ಯಾಂಕಿನ ಸಿಬ್ಬಂದಿಗಳನ್ನು ಆರೋಗ್ಯ ವಿಮೆ ಯೋಜನೆಯಲ್ಲಿ ಮೆಡಿಕ್ಲೇಮು ಪಾಲಿಸಿಗೊಳಪಡಿಸಿದ್ದು ವರದಿ ಸಾಲಿನಲ್ಲೂ ಸಿಬ್ಬಂದಿಗಳಿಗೆ ಕ್ಷೇಮದ ಸೌಲಭ್ಯ ಒದಗಿಸಿದೆ.

**ಸದಸ್ಯರ ಮರಣ ಪರಿಹಾರ ನಿಧಿ :**

ಬ್ಯಾಂಕಿನ ಸದಸ್ಯರುಗಳು ಮರಣ ಹೊಂದಿದಾಗ ನೀಡುವ ಮರಣ ಪರಿಹಾರ ನಿಧಿ ಮೊತ್ತ ರೂ.8,000/– ಗಳನ್ನು ನೀಡಲಾಗುತ್ತಿರುತ್ತದೆ.

**ಟೆಕ್ಸ್‌ಟೈಲ್ ಸಹಕಾರಿ ವಿದ್ಯಾರ್ಥಿ ಮಿತ್ರ (ಬುಕ್ ಬ್ಯಾಂಕ್):**

ಬ್ಯಾಂಕಿನಿಂದ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೇಕಾಗಿರುವ ಪಠ್ಯ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ 403 ಸದಸ್ಯರ ಮಕ್ಕಳು ನಮ್ಮ ಬುಕ್ ಬ್ಯಾಂಕಿನಿಂದ ಪಠ್ಯ ಪುಸ್ತಕಗಳನ್ನು ಪಡೆದಿರುತ್ತಾರೆ. ಈ ರೀತಿ ಪಡೆದಂತಹ ಪಠ್ಯ ಪುಸ್ತಕಗಳನ್ನು ಪರೀಕ್ಷೆ ಮುಗಿದ ನಂತರ ಕೂಡಲೇ ಬ್ಯಾಂಕಿಗೆ ವಾಪಸ್ಸು ಮಾಡುವ ಎರವಲು ಸೇವೆ ಜಾರಿಯಲ್ಲಿರುತ್ತದೆ. ವಿದ್ಯಾರ್ಥಿಗಳ ಅಜ್ಜ ಅಥವಾ ಅಜ್ಜಿಯರು ಸದಸ್ಯರಾಗಿದ್ದಲ್ಲಿ ಅವರ ಮೊಮ್ಮಕ್ಕಳಿಗೂ ಸಹ ಬುಕ್ ಬ್ಯಾಂಕ್ ಸೌಲಭ್ಯವನ್ನು ನೀಡಲಾಗುತ್ತಿದೆ.

**ಕೋರ್ ಬ್ಯಾಂಕ್ ವ್ಯವಸ್ಥೆ :**

ಕೋರ್ ಬ್ಯಾಂಕು ಅಳವಡಿಕೆಯು ಸಂಪೂರ್ಣಗೊಂಡಿದ್ದು ಬ್ಯಾಂಕಿನ ಎಲ್ಲಾ ಶಾಖೆಗಳು ಕೋರ್ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ABB (Any Branch Banking) ಬ್ಯಾಂಕಿಂಗ್ ಸೌಲಭ್ಯದ ಅಡಿಯಲ್ಲಿ ಎಲ್ಲಾ ಶಾಖೆಗಳು ಒಳಪಟ್ಟಿದ್ದು, ಸದರಿ ಸೌಲಭ್ಯದಲ್ಲಿ ನಮ್ಮ ಗ್ರಾಹಕರು ಯಾವುದೇ ಶಾಖೆಯಲ್ಲಾದರೂ ನಿಗಧಿಪಡಿಸಿರುವ ಮಿತಿಗೊಳಪಟ್ಟು ನಗದಿನ ವ್ಯವಹಾರದ ಶೀಘ್ರ ಸೇವೆ ಪಡೆಯಲು ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಮಾನ್ಯ ಸದಸ್ಯರಲ್ಲಿ ಕೋರುತ್ತೇವೆ.

1. ಉಳಿತಾಯ ಖಾತೆ, ಚಾಲ್ತಿ ಖಾತೆ ಹಾಗೂ ಓ.ಡಿ. ಖಾತೆಗಳ ನಗದು ಜಮಾ, ಖರ್ಚು ವ್ಯವಹಾರಗಳಿಗೆ ಮಾತ್ರ ಅನ್ವಯಿಸುತ್ತದೆ.
2. ಚೆಕ್ಕುಗಳ ವರ್ಗಾವಣೆಯು ನಮ್ಮ ಬ್ಯಾಂಕಿನ ಶಾಖೆಗಳ ಚೆಕ್ಕುಗಳಿಗೆ ಮಾತ್ರ ಅನ್ವಯಿಸುತ್ತದೆ.
3. ನಗದು ವ್ಯವಹಾರದ ಗರಿಷ್ಟ ಮಿತಿ ರೂ.50,000/– ಮಾತ್ರ.
4. ಖಾತೆದಾರರಿಗೆ ಮಾತ್ರ ನಗದು ಪಡೆಯಲು ಅವಕಾಶವಿರುತ್ತದೆ.

ಗ್ರಾಹಕರಿಗೆ ತ್ವರಿತ ನಗದು ಪಾವತಿಗಾಗಿ ನೇರ ನಗದು ಪಾವತಿ "Teller Counter" ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಹಾಗೂ ಈಗಾಗಲೇ ನೊಂದಾಯಿತ ಗ್ರಾಹಕರುಗಳಿಗೆ ಎಸ್.ಎಂ.ಎಸ್. ಸೇವೆ ಒದಗಿಸಲಾಗುತ್ತಿದ್ದು, ಈವರೆಗೆ ಎಸ್.ಎಂ.ಎಸ್. ಸೇವೆ ಪಡೆಯಲು ಹೆಸರು ನೊಂದಾಯಿಸದ ಗ್ರಾಹಕರು ಅವರ ಹೆಸರನ್ನು ನೊಂದಾಯಿಸಿಕೊಂಡು ಎಸ್.ಎಂ.ಎಸ್ ಸೌಲಭ್ಯವನ್ನು ಪಡೆಯುವುದು.

**ಮಾನವ ಸಂಪನ್ಮೂಲ :**

ಪ್ರಸಕ್ತ ಬ್ಯಾಂಕೋದ್ಯಮದ ವಾತಾವರಣವು ತೀವ್ರ ಪೈಪೋಟಿಯನ್ನು ಎದುರಿಸುತ್ತಿದೆ. ಬ್ಯಾಂಕು ಗ್ರಾಹಕ ಸ್ನೇಹಿಯಾಗಿ ಅವರಿಗೆ ತೃಪ್ತಿಯಾಗುವ ಸೇವೆಗಳನ್ನು ಒದಗಿಸಲು ಮಾನವ ಸಂಪನ್ಮೂಲದ ಸಮಗ್ರ ಅಭಿವೃದ್ಧಿಯತ್ತ ಒತ್ತು ಕೊಟ್ಟು, ಅಗತ್ಯವಿರುವ ವಿವಿಧ ತರಬೇತಿಗಳನ್ನು ಸಕಾಲದಲ್ಲಿ ಅವರಿಗೆ ಒದಗಿಸಿ ಅವರು ಗ್ರಾಹಕರಿಗೆ ಉತ್ತಮ

ಸೇವೆಯನ್ನು ನೀಡಲು ಹಾಗೂ ಅವರ ದಕ್ಷತೆ, ಕಾರ್ಯಕುಶಲತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ಸ್ಫೂರ್ತಿಗೊಳ್ಳಲು ನಿರ್ದೇಶಕ ಮಂಡಳಿಯು ಶ್ರಮಿಸುತ್ತಿದೆ.

ಬ್ಯಾಂಕಿನ ಅನುಮೋದಿತ ವೃಂದ ಬಲ ಹಾಗೂ ಪ್ರಸಕ್ತವಿರುವ ಸಂಖ್ಯಾ ಬಲವು ಈ ಕೆಳಕಂಡಂತಿದೆ.

ಹಾಲಿ ಕಾರ್ಯನಿರತ ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಮಂಜೂರಾತಿ ರೀತ್ಯಾ | ಕಾರ್ಯನಿರತ ಸಿಬ್ಬಂದಿ |
|---|---|---|---|
| 1 | ಮುಖ್ಯಕಾರ್ಯನಿರ್ವಾಹಕರು | 01 | 01 |
| 2 | ಅನುಪಾಲನಾಧಿಕಾರಿ | 01 | 01 |
| 3 | ಶಾಖಾ ವ್ಯವಸ್ಥಾಪಕರು | 08 | 11 |
| 4 | ಈ.ಡಿ.ಪಿ ವ್ಯವಸ್ಥಾಪಕರು | – | 01 |
| 5 | ಲೆಕ್ಕಿಗರು | 09 | 14 |
| 6 | ಹಿರಿಯ ಸಹಾಯಕರು | 22 | 20 |
| 7 | ಕಿರಿಯ ಸಹಾಯಕರು | 37 | 23 |
| 8 | ಕಛೇರಿ ಸಹಾಯಕರು | 20 | 17 |
| 9 | ವಾಹನ ಚಾಲಕರು | 03 | 02 |
| 10 | ಶೀಘ್ರಲಿಪಿಗಾರರು | 01 | – |
| | **ಒಟ್ಟು** | **102** | **90** |

**ನಿರ್ವಹಣಾ ಮಂಡಳಿ (ಬಿ.ಓ.ಎಂ) ರಚಿಸಿರುವ ಬಗ್ಗೆ:**

ಬ್ಯಾಂಕಿನ ಒಟ್ಟು ಠೇವಣಿಗಳು ರೂ.100.00 ಕೋಟಿ ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ ಅಂತಹ ಬ್ಯಾಂಕುಗಳು ನಿರ್ದೇಶಕ ಮಂಡಳಿ (ಬಿ.ಓ.ಡಿ) ಯೊಂದಿಗೆ ನಿರ್ವಹಣಾ ಮಂಡಳಿ (ಬಿ.ಓ.ಎಂ) ಹೊಂದಿರಬೇಕೆಂಬ ನಿಯಮದೊಂದಿಗೆ, ನಿರ್ವಹಣಾ ಮಂಡಳಿ (ಬಿ.ಓ.ಎಂ) ಯನ್ನು ರಚಿಸಿಕೊಳ್ಳಲು ಅನುಸರಿಸಬೇಕಾದ ನಿಯಮಗಳ ಬಗ್ಗೆ ಆರ್.ಬಿ.ಐ ಸುತ್ತೋಲೆ ಸಂಖ್ಯೆ: ಡಿ.ಓ.ಆರ್(ಪಿಸಿಬಿ)ಬಿಪಿಡಿ ಸಿಐಆರ್ ನಂ.8/12.02.002/2019–20 ದಿ:31.12.2019ರಂದು ಸುತ್ತೋಲೆ ನೀಡಿರುತ್ತದೆ.

ಸದರಿ ಆರ್.ಬಿ.ಐ ನ ಸುತ್ತೋಲೆಯ ಅನ್ವಯ ನಿರ್ವಹಣಾ ಮಂಡಳಿ (ಬಿ.ಓ.ಎಂ)ಯನ್ನು ರಚಿಸಿಕೊಳ್ಳುವ ಬಗ್ಗೆ ಬ್ಯಾಂಕಿನ ಉಪನಿಯಮಗಳಲ್ಲಿ ಅಳವಡಿಸಿಕೊಳ್ಳಲು 2019–20ನೇ ಸಾಲಿನ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದು, ನಂತರ ಇಲಾಖೆಯಿಂದ ಸರ್ವಸದಸ್ಯರ ಸಭೆಯ ಬೈಲಾ ತಿದ್ದು ಪಡಿಯನ್ನು ದಿ:18.02.2021ರಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ. ನಂತರ ದಿ:28.06.2021 ರಂದು ನಡೆದ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ವಹಣಾ ಮಂಡಳಿ (ಬಿ.ಓ.ಎಂ) ಯನ್ನು ರಚಿಸಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಿದೆ.

**ನಿರ್ವಹಣಾ ಮಂಡಳಿಯ ಸದಸ್ಯರುಗಳ ವಿವರ**

| ಕ್ರ. ಸಂ. | ಸರ್ವಶ್ರೀ | ಪದನಾಮ |
|---|---|---|
| 1 | ಎಲ್. ಕೆ. ಜಯರಾಮ್‌ರವರು | ಅಧ್ಯಕ್ಷರು (ವೃತ್ತಿಪರ ನಿರ್ದೇಶಕರು.) |
| 2 | ಜಿ. ಶಿವಕುಮಾರ್‌ರವರು | ಸದಸ್ಯರು (ವೃತ್ತಿಪರ ನಿರ್ದೇಶಕರು.) |
| 3 | ಮಾಧವರವರು | ಸದಸ್ಯರು (ನಿರ್ದೇಶಕರು.) |
| 4 | ಪಿ. ಎಂ. ನಾಗರಾಜುರವರು | ಸದಸ್ಯರು (ನಿರ್ದೇಶಕರು.) |
| 5 | ಎಸ್. ಉಮಾಶಂಕರ್‌ರವರು | ಸದಸ್ಯರು (ನಿರ್ದೇಶಕರು.) |
| 6 | ಆರ್. ಭಾಸ್ಕರ್‌ರವರು | ಸದಸ್ಯರು (ನಿರ್ದೇಶಕರು.) |
| 7 | ಡಿ. ಗಿರೀಶ್‌ರವರು | ಸದಸ್ಯರು (External) |
| 8 | ಹೆಚ್. ಪಿ. ಉತ್ತಮ್ ಶಂಕರ್‌ರವರು | ಸದಸ್ಯರು (External) |
| 9 | ಹೆಚ್. ಗೋಪಾಲಕೃಷ್ಣರವರು | ಸದಸ್ಯರು (External) |
| 10 | ಡಾ: ಎಸ್. ಹರೀಶ್‌ರವರು | ಸದಸ್ಯರು (External) |
| 11 | ಎಂ. ಟಿ. ಲಕ್ಷ್ಮೀಕುಮಾರ್‌ರವರು | ಸದಸ್ಯರು (External) |
| 12 | ಎಂ. ಸೋಮಶೇಖರ್‌ರವರು | ಸದಸ್ಯರು (External) |

**ವ್ಯವಸ್ಥಾಪಕ ನಿರ್ದೇಶಕರನ್ನು (ಎಂ.ಡಿ) ನೇಮಿಸಿಕೊಂಡಿರುವ ಬಗ್ಗೆ.**

ಭಾರತೀಯ ರಿಸರ್ವ್ ಬ್ಯಾಂಕು ಮುಖ್ಯಕಾರ್ಯನಿರ್ವಾಹಕರ ಹುದ್ದೆಯನ್ನು ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಹುದ್ದೆಗೆ ಬದಲಿಸಿ, ವ್ಯವಸ್ಥಾಪಕ ನಿರ್ದೇಶಕ ಹುದ್ದೆ ನೇಮಕಾತಿಗೆ ಎನ್.ಆರ್.ಸಿ ಸಮಿತಿಯನ್ನು ರಚಿಸಿ ಸಮಿತಿಯ ಶಿಫಾರಸ್ಸಿನೊಂದಿಗೆ ಕಾರ್ಯಕಾರಿ ಮಂಡಳಿಯಲ್ಲಿ ವ್ಯವಸ್ಥಾಪಕ ನಿರ್ದೇಶಕ ಹುದ್ದೆ ನೇಮಕಾತಿಯ ನಿರ್ಣಯವನ್ನು ಮಾಡಿ ಶಿಫಾರಸ್ಸನ್ನು ಆರ್.ಬಿ.ಐ ಗೆ ಸಲ್ಲಿಸಲಾಗಿದೆ.

ಅದರಂತೆ ಆರ್.ಬಿ.ಐನ ಸುತ್ತೋಲೆ ಸಂಖ್ಯೆ:ಆರ್.ಬಿ.ಐ/2021–22:ಡಿ.ಓ.ಆರ್.ಜಿಓವಿ.ಆರ್‌ಇಸಿ.25/12.10000/ 2021–22 ದಿನಾಂಕ : 25.06.2021ರ ಅನ್ವಯ ದಿನಾಂಕ : 29.07.2021ರ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಎನ್.ಆರ್.ಸಿ ಸಮಿತಿಯ ಶಿಫಾರಸ್ಸಿನಂತೆ ಹಾಲಿ ಬ್ಯಾಂಕಿನಲ್ಲಿ ಪ್ರಭಾರ ಮುಖ್ಯಕಾರ್ಯನಿರ್ವಾಹಕರಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ ಡಿ.ಸಂಜೀವಣ್ಣರವರನ್ನು ಅವರ ಸೇವಾ ಅವಧಿಯ ಅಂತ್ಯ ದಿನಾಂಕ : 31.05.2022ರ ವರೆಗೆ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನೇಮಿಸಿಕೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ, ಶಿಫಾರಸ್ಸನ್ನು ಆರ್.ಬಿ.ಐ. ಗೆ ಸಲ್ಲಿಸಲಾಗಿದೆ.

**ಕೃತಜ್ಞತೆಗಳು :**

ಬ್ಯಾಂಕಿನ ಯಶಸ್ಸಿಗೆ ಠೇವಣಿ ಸಂಗ್ರಹ ಹಾಗೂ ಸಾಲ ವಿತರಣೆ ಮೂಲಾಧಾರ. ನಮ್ಮ ಕೋರಿಕೆಗೆ ಮನ್ನಣೆಯಿತ್ತು ಬ್ಯಾಂಕಿನಲ್ಲಿ ಠೇವಣಿಯನ್ನು ತೊಡಗಿಸಿ ಬ್ಯಾಂಕಿನ ಅಭಿವೃದ್ಧಿಗೆ ಕಾರಣರಾದ ಎಲ್ಲಾ ಠೇವಣಿದಾರರಿಗೂ, ಗ್ರಾಹಕರಿಗೂ ಅಲ್ಲದೆ ವೇಳೆಗೆ ಸರಿಯಾಗಿ ಕಂತು ಮತ್ತು ಬಡ್ಡಿ ಪಾವತಿಸುವ ಮೂಲಕ ಸಾಲ ಮರುಪಾವತಿಸಿದ ಸದಸ್ಯರುಗಳೆಲ್ಲರಿಗೂ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಈ ಕೆಳಕಂಡ ಸಂಸ್ಥೆಗಳು ನಮ್ಮ ಬ್ಯಾಂಕಿನಲ್ಲಿ ಠೇವಣಿ ಇಟ್ಟು ಬ್ಯಾಂಕಿನ ಪುರೋಭಿವೃದ್ಧಿಗೆ ಕಾರಣರಾಗಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇವೆ.

ದೇವಾಂಗ ಸಂಘ, ದೇವಾಂಗ ಯೂನಿಯನ್ ಸ್ಪೋರ್ಟ್ಸ್ ಕ್ಲಬ್, ಹಂಪಿ ಹೇಮಕೂಟ, ಶ್ರೀ ಗಾಯಿತ್ರಿ ಪೀಠ ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾ ಸ್ವಾಮೀಜಿ, ಶ್ರೀ ಗಾಯಿತ್ರಿ ಪೀಠ ಮಹಾ ಸಂಸ್ಥಾನ, ಶ್ರೀ ಓಣಿ ಆಂಜನೇಯ ಸ್ವಾಮಿ ಟೆಂಪಲ್ ಟ್ರಸ್ಟ್, ಶ್ರೀ.ಮಾರುತಿ ಗೃಹ ನಿರ್ಮಾಣ ಸೊಸೈಟಿ, ಮೈಸೂರು ಪವರ್‌ಲೂಂ ಸಿಲ್ಕ್ ಮ್ಯಾನುಫ್ಯಾಕ್ಚರರ್ಸ್ ಕೋ–ಆಪರೇಟಿವ್ ಸೊಸೈಟಿ ಲಿ., ಕರ್ನಾಟಕ ರಾಜ್ಯ ಪವರ್‌ಲೂಂ ಮಾರ್ಕೆಟಿಂಗ್ ಫೆಡರೇಷನ್, ಕೆ.ಆರ್.ಶೆಟ್ಟಿಪೇಟೆ ಮರ್ಚೆಂಟ್ಸ್ ಅಸೋಸಿಯೇಟ್ಸ್, ಶ್ರೀ.ವಿನಾಯಕ ವಿದ್ಯಾಸಂಸ್ಥೆ, ಅಮರಜ್ಯೋತಿ ಲೈಬ್ರರಿ, ಮೈಸೂರು ಪ್ರಾಂತೀಯ ರೇಷ್ಮೆ ಕೈಮಗ್ಗದವರ ಸಹಕಾರ ಸಂಘ, ಮುದ್ದಪ್ಪ ಬಿ.ವಿ. ವೆಂಕಟಮ್ಮ ಮುದ್ದಪ್ಪ ಸೇವಾ ಸಮಿತಿ, ಕಾಮನಗುಡಿ ಚ್ಯಾರಿಟೀಸ್, ಆಂಧ್ರ ದೇವಾಂಗ ಸಂಘ, ಮೆ:ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ, ಶ್ರೀ ಜೀವ್ಹೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ., ಶ್ರೀ ಜೀವ್ಹೇಶ್ವರ ವಿದ್ಯಾಭಿವೃದ್ಧಿ ಟ್ರಸ್ಟ್, ತೊಗಟವೀರ ಸಂಘ, ಗಾಯಿತ್ರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಶ್ರೀ ವೀರಶೈವ ಸಧರ್ಮ ವರ್ಧಿನಿ ಸಂಘ, ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದ ನ್ಯಾಸ, ಶ್ರೀ ಸಿದ್ದೇಶ್ವರ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ, ಶ್ರೀ ಚೌಡೇಶ್ವರಿ ಚಾರಿಟೆಬಲ್ ಟ್ರಸ್ಟ್–ಲಕ್ಕಸಂದ್ರ, ಶ್ರೀ ಕೋದಂಡರಾಮ ಟೆಂಪಲ್ ಟ್ರಸ್ಟ್–ಪ್ರಕಾಶನಗರ, ನವಜ್ಯೋತಿ ಕನ್ನಡ ಕಲಾ ಸಂಘ–ಆನೇಕಲ್, ಶಾರದಾ ಸೇವಾಶ್ರಮ–ದೊಡ್ಡಬಳ್ಳಾಪುರ, ದಿ ಮೈಸೂರ್ ಸಿಲ್ಕ್ ಹ್ಯಾಂಡ್ ಲೂಂ ವೀವರ್ಸ್ ಅಸೋಸಿಯೇಷನ್ ಹಾಗೂ ಬ್ಯಾಂಕಿನ ಕಾರ್ಯನಿರ್ವಹಣೆಗಾಗಿ ಮತ್ತು ದಿನನಿತ್ಯದ ವ್ಯವಹಾರವು ಸುಗಮವಾಗಿ ಸಾಗಲು ಸಹಕರಿಸಿದ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಐ.ಡಿ.ಬಿ.ಐ. ಬ್ಯಾಂಕ್, ಇಂಡಸ್‌ಇಂದ್ ಬ್ಯಾಂಕ್, ಐ.ಸಿ.ಐ.ಸಿ.ಐ. ಬ್ಯಾಂಕು, ಪಂಜಾಬ್ ನ್ಯಾಷನಲ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ (ವಿಜಯ ಬ್ಯಾಂಕ್)–ಗೊಟ್ಟಿಗೆರೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸೆಂಟ್ ಮಾರ್ಕ್ಸ್ ರಸ್ತೆ ಮತ್ತು ಆನೇಕಲ್, ಕೆನರಾ ಬ್ಯಾಂಕ್ (ಸಿಂಡಿಕೇಟ್ ಬ್ಯಾಂಕ್) ಆನೇಕಲ್, ಆಕ್ಸಿಸ್ ಬ್ಯಾಂಕ್‌ಗಳ ಅಧಿಕಾರಿಗಳಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಕಾಲಕಾಲಕ್ಕೆ ಸೂಕ್ತ ನಿರ್ದೇಶನ ಹಾಗೂ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ ನಾವು ಅಭಾರಿಯಾಗಿದ್ದೇವೆ. ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ನೀಡುತ್ತಿರುವ ಸಹಕಾರ ಇಲಾಖೆಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ. ಪುಂಡಲೀಕ ಎನ್.ಕೆರೂರೆ ಹಾಗೂ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ. ಸುಧಾಕರ ಭಟ್‌ರವರು ಬ್ಯಾಂಕಿನ ಅಭಿವೃದ್ಧಿಗೆ ಉಪಯುಕ್ತ ಸಲಹೆಗಳನ್ನು ನೀಡಿರುತ್ತಾರೆ. ಇವರುಗಳಿಗೂ ಸಹ ನಮ್ಮ ಕೃತಜ್ಞತೆಗಳು.

2020–21ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೀಲಿಸಿದ ಸನ್ನದು ಲೆಕ್ಕ ಪರಿಶೋಧಕರಾದ ಮೆ: ಆಕಾಸಂ ಅಂಡ್ ಅಸೋಸಿಯೇಟ್ಸ್ ರವರಿಗೆ ನಾವು ವಂದಿಸುತ್ತೇವೆ.

ಬ್ಯಾಂಕಿನ ಪುರೋಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ನಾವು ವಂದಿಸುತ್ತೇವೆ.

ಕೊನೆಯದಾಗಿ ಬ್ಯಾಂಕಿನ ಸದಸ್ಯರುಗಳು ಶಿಸ್ತು ಕಾಪಾಡಿಕೊಂಡು ಬ್ಯಾಂಕಿನ ನಿರ್ದೇಶಕ ಮಂಡಳಿಯೊಂದಿಗೆ ಮಧುರ ಸಂಬಂಧ ಇಟ್ಟುಕೊಂಡು ಬ್ಯಾಂಕಿನ ಸಂಪನ್ಮೂಲಗಳನ್ನು ಗಣನೀಯವಾಗಿ ಹೆಚ್ಚಿಸಲು ಸಹಕಾರ ನೀಡಿದ್ದಕ್ಕಾಗಿ ತಮಗೆಲ್ಲಾ ವಂದನೆಯನ್ನು ಅರ್ಪಿಸುತ್ತಿದ್ದೇವೆ.

**ನಿರ್ದೇಶಕ ಮಂಡಳಿ ಅಪ್ಪಣೆ ಮೇರೆಗೆ,**
**ಸಹಿ/–**
**ಡಿ. ಸಂಜೀವಣ್ಣ**
**ಮುಖ್ಯ ಕಾರ್ಯನಿರ್ವಾಹಕರು (ಪ್ರ).**

**ವಿಷಯ 7: 2020–21ನೇ ಸಾಲಿಗೆ ಬಡ್ಜೆಟ್ ಮಂಜೂರಾತಿಗಿಂತ ಹೆಚ್ಚುವರಿ ಖರ್ಚಾಗಿರುವ ಬಾಬತ್ತಿನ ಅನುಮೋದನೆ.**

| ಕ್ರಮ ಸಂಖ್ಯೆ | ವಿವರ | 2020–21ಕ್ಕೆ ಮಂಜೂರಾದದ್ದು ರೂ. ಪೈ. | 2020–21ಕ್ಕೆ ಖರ್ಚಾದದ್ದು ರೂ. ಪೈ. | ಹೆಚ್ಚುವರಿ ರೂ. ಪೈ. |
|---|---|---|---|---|
| 1 | ಸಿಬ್ಬಂದಿ ಗ್ರಾಚ್ಯುಯಿಟಿ | 65,00,000.00 | 70,00,000.00 | 5,00,000.00 |
| 2 | ಡಿಜಿಟಲ್ ಸಹಿ ಖರ್ಚು | 20,000.00 | 24,362.86 | 4,362.86 |

1. ಸಿಬ್ಬಂದಿಗಳಿಗೆ ರಾಜ್ಯ ಸರ್ಕಾರದ 6ನೇ ವೇತನ ಆಯೋಗದ ವೇತನವನ್ನು ಜಾರಿಗೊಳಿಸಿದ್ದರ ಹಾಗೂ ವಯೋನಿವೃತ್ತಿ ಹೊಂದುತ್ತಿರುವ ಸಿಬ್ಬಂದಿಗಳಿಗೆ ಹೆಚ್ಚುವರಿಯಾಗಿ ಕಾಯ್ದಿರಿಸಿದ್ದರಿಂದಾಗಿ ಗ್ರಾಚ್ಯುಯಿಟಿ ಮೊತ್ತದಲ್ಲಿ ಹೆಚ್ಚಳವಾಗಿರುತ್ತದೆ.

2. CERSAIಗೆ ಶಾಖಾವಾರು ಮಾಹಿತಿಯನ್ನು ಸಲ್ಲಿಸುವುದು ಅವಶ್ಯಕವಾದ್ದರಿಂದ ಎಲ್ಲಾ ಶಾಖಾ ವ್ಯವಸ್ಥಾಪಕರ ಡಿಜಿಟಲ್ ಸಹಿಯನ್ನು ಪಡೆದುದರ ಸಲುವಾಗಿ ಡಿಜಿಟಲ್ ಸಹಿ ಖರ್ಚು ಹೆಚ್ಚಾಗಿರುತ್ತದೆ.

**ವಿಷಯ 8: 2020–21ನೇ ಸಾಲಿನ ನಷೆ ವಿಲೇವಾರಿ ಮತ್ತು ಲಾಭಾಂಶ (ಡಿವಿಡೆಂಡ್) ಘೋಷಣೆಗೆ ಮಂಜೂರಾತಿ ನೀಡುವುದು.**

| ಕ್ರ. ಸಂ. | ವಿವರ | ರೂ. ಪೈ. | ರೂ. ಪೈ. |
|---|---|---|---|
| | 2020–21ನೇ ಸಾಲಿನ ನಿವ್ವಳ ಲಾಭದ ಮೊತ್ತ | | **58,54,884.99** |
| 1 | ಆಪದ್ಧನ ನಿಧಿಗೆ ಶೇ.25 | 14,63,721.00 | 43,91,163.99 |
| 2 | ಸಹಕಾರ ವಿದ್ಯಾಭ್ಯಾಸ ನಿಧಿ ಶೇ.2 | 87,823.00 | 43,03,340.99 |
| 3 | ಕರ್ನಾಟಕ ರಾಜ್ಯ ಪಟ್ಟಣ ಸಹಕಾರಿ ಬ್ಯಾಂಕುಗಳ ಮಹಾಮಂಡಳ ಅಭಿವೃದ್ದಿ ಕಾರ್ಯಕ್ಕೆ ಶೇ.1 | 43,033.00 | 42,60,307.99 |
| 4 | ಸದಸ್ಯರುಗಳ ಮರಣ ಸಹಾಯಾರ್ಥ ನಿಧಿ | 2,70,000.00 | 39,90,307.99 |
| 5 | ಷೇರು ಡಿವಿಡೆಂಡು ವಿತರಣಾ ನಿಧಿ ಶೇ.6.00 ರಂತೆ | 39,80,289.00 | 10,018.99 |
| | **ಒಟ್ಟು** | **58,44,866.00** | |
| | ಉಳಿಕೆ ಮೊತ್ತ ಆಪದ್ದನ ನಿಧಿಗೆ | 10,018.99 | |
| | **ಒಟ್ಟು** | **58,54,884.99** | |

**ವಿಷಯ 9: 2021–22ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ ಪಟ್ಟಿಯನ್ನು ಅಂಗೀಕರಿಸುವುದು.**

| ಕ್ರ ಸಂ. | ವಿವರ | 2020–21ನೇ ಸಾಲಿಗೆ ಶಿಫಾರಸ್ಸು | 2020–21ನೇ ಸಾಲಿಗೆ ತಗುಲಿದ ವೆಚ್ಚ | 2021–22ನೇ ಸಾಲಿಗೆ ಶಿಫಾರಸ್ಸು |
|---|---|---|---|---|
| 1 | ಠೇವಣಿಗಳ ಮತ್ತು ಸಾಲಗಳ ಮೇಲಿನ ಬಡ್ಡಿ | 20,00,00,000.00 | 19,00,85,796.00 | 19,99,00,000.00 |
| 2 | ಸಿಬ್ಬಂದಿ ಸಂಬಳ ಪಿಎಫ್ ವಗೈರೆ | 5,60,00,000.00 | 5,07,78,184.00 | 6,00,00,000.00 |
| 3 | ಅಂಚೆ, ತಂತಿ, ದೂರವಾಣಿ | 6,00,000.00 | 3,86,123.12 | 6,00,000.00 |
| 4 | ಬಾಡಿಗೆ, ತೆರಿಗೆ, ವಿದ್ಯುಚ್ಛಕ್ತಿ, ಇತರೇ | 80,00,000.00 | 68,08,712.17 | 75,00,000.00 |
| 5 | ಲೇಖನ ಸಾಮಗ್ರಿ ಮತ್ತು ಮುದ್ರಣ | 8,00,000.00 | 4,67,723.11 | 8,00,000.00 |
| 6 | ನಿರ್ದೇಶಕರ ಸಭೆ ಖರ್ಚು | 2,00,000.00 | 1,16,764.00 | 2,00,000.00 |
| 7 | ಸಮಾರಂಭ | 4,00,000.00 | 76,802.73 | 5,00,000.00 |
| 8 | ಇತರೇ ಖರ್ಚು | 8,00,000.00 | 7,78,491.37 | 8,00,000.00 |
| 9 | ಸರ್ವಸದಸ್ಯರ ಸಭೆ ಖರ್ಚು | 15,00,000.00 | 7,17,103.40 | 35,00,000.00 |
| 10 | ಜಾಹೀರಾತು | 6,00,000.00 | 2,38,563.00 | 6,00,000.00 |
| 11 | ವಿಮೆ ಕಂತು (ಬ್ಯಾಂಕು ಪಾಲಿಸಿ ಮತ್ತು ಠೇವಣಿ) | 70,00,000.00 | 57,72,368.44 | 75,00,000.00 |
| 12 | ಸಾರಿಗೆ ವೆಚ್ಚ/ತರಬೇತು/ಪ್ರಯಾಣ | 8,00,000.00 | 3,30,742.00 | 8,00,000.00 |
| 13 | ಸಂಘ ಸಂಸ್ಥೆಗಳ ನೊಂದಣಿ ಮತ್ತು ವಾರ್ಷಿಕ ಶುಲ್ಕ | 3,00,000.00 | 1,53,700.00 | 3,00,000.00 |
| 14 | ಕಾನೂನು ವೆಚ್ಚ | 10,00,000.00 | 2,89,740.00 | 6,00,000.00 |
| 15 | ಮರಮುಟ್ಟುಗಳು, ವಾಹನ, ಗಣಕಯಂತ್ರ ಇಳುವರಿ | 35,00,000.00 | 22,03,272.00 | 30,00,000.00 |
| 16 | ಕಲ್ಪತರು ಏಜೆಂಟರ ಕಮೀಷನ್ | 12,00,000.00 | 8,16,710.00 | 10,00,000.00 |
| 17 | ವಾಹನ ರಿಪೇರಿ, ನಿರ್ವಹಣೆ | 5,00,000.00 | 3,34,171.00 | 4,00,000.00 |
| 18 | ನಿರ್ದೇಶಕರ ಸಭಾ ಭತ್ಯೆ | 11,00,000.00 | 6,07,500.00 | 11,00,000.00 |
| 19 | ಗಣಕಯಂತ್ರಗಳ ನಿರ್ವಹಣೆ | 2,00,000.00 | 36,430.37 | 2,00,000.00 |
| 20 | ಇತರೇ ಯಂತ್ರಗಳ ನಿರ್ವಹಣೆ | 4,00,000.00 | 3,66,363.03 | 4,00,000.00 |
| 21 | ಸಾಫ್ಟ್‌ವೇರ್ ಖರ್ಚು (ಸಿಬಿಎಸ್, ಎಟಿಎಂ & ಇತರೇ) | 55,00,000.00 | 33,67,000.58 | 60,00,000.00 |
| 22 | ಸಿಬ್ಬಂದಿ ಗ್ರಾಚುಯಿಟಿ | 65,00,000.00 | 70,00,000.00 | 65,00,000.00 |
| 23 | ಸಮವರ್ತಿ ಆಡಿಟ್ ಶುಲ್ಕ ಮತ್ತು ಈಡಿಪಿ ಆಡಿಟ್ ಶುಲ್ಕ | 15,00,000.00 | 12,94,370.00 | 14,00,000.00 |
| 24 | ಲೆಕ್ಕ ಪರಿಶೋಧನಾ ಶುಲ್ಕ | 13,00,000.00 | 8,87,450.00 | 10,00,000.00 |
| 25 | ಕಛೇರಿ ನಿರ್ವಹಣೆ / ಪಾಲನೆ | 50,00,000.00 | 46,39,493.11 | 55,00,000.00 |
| 26 | ಎಂ.ಐ.ಸಿ.ಆರ್.ಖರ್ಚು | 5,00,000.00 | 3,11,610.82 | 5,00,000.00 |
| 27 | ಡಿಜಿಟಲ್ ಸಹಿ ಖರ್ಚು | 20,000.00 | 24,362.86 | 30,000.00 |
| 28 | ಸಾಲಗಳ ಮೇಲಿನ ಬಡ್ಡಿ ರಿಯಾಯಿತಿ | 30,00,000.00 | 8,80,533.00 | 15,00,000.00 |
| | **ಒಟ್ಟು** | **30,82,20,000.00** | **26,65,69,664.09** | **31,21,30,000.00** |

**2021–22ನೇ ಸಾಲಿಗೆ ನಿರೀಕ್ಷಿಸುವ ಅಂದಾಜು ವರಮಾನ**

| ಕ್ರಮ ಸಂಖ್ಯೆ | ವಿವರ | 2020–21ಕ್ಕೆ ಬಂದಿರುವ ವರಮಾನ | 2021–22ನೇ ಸಾಲಿನಲ್ಲಿ ನಿರೀಕ್ಷಣೆ |
|---|---|---|---|
| 1 | ಸಾಲಗಳ ಮೇಲಿನ ಬಡ್ಡಿ | 21,69,20,164.00 | 23,67,20,000.00 |
| 2 | ಹೂಡಿಕೆಗಳ ಮೇಲೆ ಬಡ್ಡಿ | 9,53,93,738.02 | 9,50,00,000.00 |
| 3 | ಕಮೀಷನ್ ವಗೈರೆ | 84,22,379.22 | 70,00,000.00 |
| 4 | ಇತರೇ | 58,79,122.38 | 5,00,000.00 |
| | **ಜುಮ್ಲಾ** | **32,66,15,403.62** | **33,92,20,000.00** |

| | | |
|---|---|---|
| 1 | 2021–22 ನೇ ಸಾಲಿಗೆ ನಿರೀಕ್ಷಿಸುವ ಅಂದಾಜು ವರಮಾನ | **33,92,20,000.00** |
| 2 | 2021–22 ನೇ ಸಾಲಿಗೆ ನಿಯಮಾನುಸಾರ ಈ ಕೆಳಕಂಡಂತೆ ಕಾದಿರಿಸುವುದು | |
| | ಹೂಡಿಕೆಗಳ ಮೇಲೆ ಕಾಯ್ದಿರಿಸುವುದು | 6,00,000.00 |
| | | **33,86,20,000.00** |
| 3 | 2021–22 ನೇ ಸಾಲಿಗೆ ಅಂದಾಜು ಖರ್ಚು | 31,21,30,000.00 |
| | | 2,64,90,000.00 |
| 4 | ವರಮಾನ ತೆರಿಗೆ | 65,26,840.00 |
| 5 | 2021–22 ನೇ ಸಾಲಿಗೆ ನಿರೀಕ್ಷಿಸುವ ನಿವ್ವಳ ಲಾಭ/ನಷ್ಟ | **1,99,63,160.00** |

**ವಿಷಯ 10: ಬ್ಯಾಂಕಿನ ಮುಂಬರುವ ವರ್ಷದ ಕಾರ್ಯಚಟುವಟಿಕೆಗಳ ಬಗ್ಗೆ ಆಡಳಿತ ಮಂಡಳಿಯ ರೂಪು ರೇಷೆ:**

**2021–22ರ ವಾರ್ಷಿಕ ಸಾಲಿಗೆ ನಮ್ಮ ನಿರ್ದೇಶಕರ ಮಂಡಳಿಯು ಕೆಳಕಂಡ ಗುರಿಗಳನ್ನು ಹೊಂದಿರುತ್ತದೆ.**

1. **ಬ್ಯಾಂಕಿನ ಒಟ್ಟಾರೆ ಠೇವಣಿ ಸಂಗ್ರಹದ ಗುರಿ ರೂ. 336.27 ಕೋಟಿಗಳು.**
2. **ಬ್ಯಾಂಕಿನ ಒಟ್ಟಾರೆ ಸಾಲ ಮುಂಗಡಗಳ ಗುರಿ ರೂ. 214.65 ಕೋಟಿಗಳು.**
3. **ಸದಸ್ಯರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳು ಉದಾಹರಣೆಗೆ ಬುಕ್ ಬ್ಯಾಂಕ್ ಸೇವೆಯನ್ನು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರವನ್ನು ಹೆಚ್ಚು ಹೆಚ್ಚು ನೀಡಲು ಕ್ರಮವಿಡುವುದು.**
4. **ಬ್ಯಾಂಕು ಸ್ವಂತ ಕಟ್ಟಡಗಳನ್ನು ಹೊಂದುವ ಗುರಿ ಇಟ್ಟುಕೊಂಡಿದ್ದು ಅದೇ ಪ್ರಕಾರವಾಗಿ ಆನೇಕಲ್‌ನಲ್ಲಿ ಬ್ಯಾಂಕು ಹೊಂದಿರುವ ನಿವೇಶನದಲ್ಲಿ ಕಟ್ಟಡವನ್ನು ನಿರ್ಮಿಸಲಾಗುತ್ತಿದ್ದು ಪೂರ್ಣಗೊಳಿಸುವುದು.**
5. **ಸರ್ಕಾರದ ಆದೇಶದ ಮೇರೆಗೆ ಶೇ.1 ಹಾಗೂ ಶೇ.3 ರ ಬಡ್ಡಿದರದ ನೇಕಾರಿಕೆ ಸಾಲಗಳನ್ನು ಮುಂದುವರೆಸಲಾಗುವುದು.**
6. **ಆಯಾ ಶಾಖಾ ಸ್ಥಳಗಳಲ್ಲಿಯೇ ಸದಸ್ಯರುಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸುವುದು.**
7. **ರುಪೇ ಡೆಬಿಟ್ ಕಾರ್ಡಿನ ಮುಖಾಂತರ ಎ.ಟಿ.ಎಂ ಸೌಲಭ್ಯಗಳನ್ನು ಹೊಂದಲು ವ್ಯವಸ್ಥೆ ಮಾಡುವುದು.**
8. **ನೇಕಾರ ಸದಸ್ಯರುಗಳಿಗೆ ಸರ್ಕಾರದ ಅನುದಾನಗಳನ್ನು ತ್ವರಿತವಾಗಿ ಒದಗಿಸುವುದು.**

**ಬ್ಯಾಂಕು ಜನವರಿ 2022ರಲ್ಲಿ ಬ್ಯಾಂಕಿನ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಯೋಜನೆಯನ್ನು ರೂಪಿಸಿಕೊಂಡಿದೆ.**

**ವಿಷಯ 11: ಬ್ಯಾಂಕಿನ ಅಧಿಕೃತ ಷೇರು ಬಂಡವಾಳಕ್ಕೆ ಸಭೆಯು ನೀಡಿದ್ದ ಅನುಮತಿಯನ್ನು ಮುಂದುವರಿಸುವ ಬಗ್ಗೆ.**

ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ಅಧಿಕೃತ ಷೇರು ಬಂಡವಾಳವನ್ನು ರೂ.20.00 ಕೋಟಿಗೆ ಅನುಮೋದನೆ ಪಡೆಯಲಾಗಿದ್ದು, ಪ್ರಸಕ್ತ ಸಾಲಿಗೆ ಅದನ್ನು ಮುಂದುವರೆಸಿಕೊಂಡು ಹೋಗಲು ಆಡಳಿತ ಮಂಡಳಿ ಶಿಫಾರಸ್ಸು ಮಾಡಿ ಸರ್ವಸದಸ್ಯರ ಅನುಮೋದನೆ ಕೋರಲಾಗಿದೆ.

**ವಿಷಯ 12: ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಮಾರ್ಗಸೂಚಿಯಂತೆ 2021–22ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಂಡಿರುವ ಬಗ್ಗೆ.**

ಬ್ಯಾಂಕಿಂಗ್ ರೆಗ್ಯೂಲೇಷನ್ ಕಾಯಿದೆಯ ತಿದ್ದುಪಡಿಯಂತೆ ಶಾಸನ ಬದ್ಧ ಲೆಕ್ಕಪರಿಶೋಕರನ್ನು ನೇಮಿಸುವ ಅಧಿಕಾರ ಆರ್.ಬಿ.ಐ ಗೆ ಬಂದ ನಂತರ ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಆರ್.ಬಿ.ಐ/2021–22/25ಡಿ.ಓ.ಎಸ್.ಸಿ.ಓ.ಎ.ಆರ್.ಜಿ/ಎಸ್.ಇ.ಸಿ.01/08.91.001/2021–22 ದಿ:27.04.2021 ರನ್ವಯ ರೂ.1000.00 ಕೋಟಿವರೆಗೆ ಠೇವಣಿ ಹೊಂದಿರುವ ಬ್ಯಾಂಕುಗಳು ಲೆಕ್ಕಪರಿಶೋಧನೆಯನ್ನು ಪಾಲುದಾರಿಕೆ ಲೆಕ್ಕಪರಿಶೋಧನಾ ಸಂಸ್ಥೆಗಳಿಗೆ ನೀಡಬೇಕೆಂದು, ಸದರಿ ಸಂಸ್ಥೆಯಲ್ಲಿ ಇಬ್ಬರು ಪೂರ್ಣಾವಧಿಯ ಪಾಲುದಾರರಾಗಿರಬೇಕು. ಕನಿಷ್ಠ 03 ವರ್ಷದ ಅವಧಿವರೆಗಾದರೂ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದು, ಸದರಿ ಸಂಸ್ಥೆಯು ಸರ್ಕಾರದ ಆಡಿಟ್ ಎಂಪ್ಯಾನೆಲ್‌ಮೆಂಟ್‌ನಲ್ಲಿ ನೊಂದಣಿಯಾಗಿರಬೇಕು. ಈ ಎಲ್ಲಾ ಅರ್ಹತೆಗಳನ್ನು ಹೊಂದಿರುವ ಇಬ್ಬರು ಲೆಕ್ಕಪರಿಶೋಧಕರಿಂದ ಒಪ್ಪಿಗೆ ಪತ್ರ ಪಡೆದು ಕಾರ್ಯಕಾರಿ ಮಂಡಳಿಯ ಶಿಫಾರಸ್ಸಿನೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಬೇಕಿರುತ್ತದೆ.

ಆರ್.ಬಿ.ಐ ಸುತ್ತೋಲೆಯ ನಿಯಮಗಳ ಪ್ರಕಾರ ಈ ಎಲ್ಲಾ ಅರ್ಹತೆಗಳನ್ನು ಹೊಂದಿರುವ 1. ಮೆ:ಆಕಾಸಂ ಅಂಡ್ ಅಸೋಸಿಯೇಟ್ಸ್ ರವರಿಗೆ ಮೊದಲನೇ ಆದ್ಯತೆ 2. ಮೆ: ಎಂ.ಎಸ್.ಎಸ್.ವಿ ಅಂಡ್ ಕಂ., ರವರಿಗೆ ಎರಡನೇ ಆದ್ಯತೆ ನೀಡಿ 2021–22ನೇ ಸಾಲಿಗೆ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಿಸಲು ಹಾಗೂ ಲೆಕ್ಕಪರಿಶೋಧಕರ ಸಂಭಾವನೆಯನ್ನು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ಅನ್ವಯ ನಿಗಧಿಪಡಿಸಲು ದಿನಾಂಕ : 29.07.2021ರ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ, ಭಾರತೀಯ ರಿಸರ್ವ್ ಬ್ಯಾಂಕಿಗೆ ಶಿಫಾರಸ್ಸನ್ನು ಸಲ್ಲಿಸಲಾಗಿದೆ.

**ವಿಷಯ 13: ಬ್ಯಾಂಕಿನ ನಿರ್ದೇಶಕರುಗಳಿಗೆ, ಅವರ ಹತ್ತಿರ ಸಂಬಂಧಿಗಳಿಗೆ ಮತ್ತು ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ನೀಡಿದ್ದ ಸಾಲಗಳು ಮತ್ತು ಇದರ ಸುಸ್ತಿ ಸಾಲಗಳು ಏನಾದರೂ ಇದ್ದಲ್ಲಿ ಅವುಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಪರಿವೀಕ್ಷಣೆ.**

ಪ್ರಸಕ್ತ ಸಾಲಿನಲ್ಲಿ ಚುನಾಯಿತರಾದ ನಿರ್ದೇಶಕರುಗಳಿಗಾಗಲಿ, ಅವರ ಹತ್ತಿರದ ಸಂಬಂಧಿಕರುಗಳಿಗಾಗಲಿ ಅಥವಾ ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗಾಗಲೀ ಯಾವುದೇ ರೀತಿಯ ಸಾಲವನ್ನು (ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ) ಮಂಜೂರು ಮಾಡಿರುವುದಿಲ್ಲ. ದಿ:25.07.2018ರಂದು ಹೊಸ ನಿರ್ದೇಶಕ ಮಂಡಳಿಯು ಅಸ್ತಿತ್ವಕ್ಕೆ ಬಂದಿದ್ದು, ಹಾಲಿ ನಿರ್ದೇಶಕ ಮಂಡಳಿಯಲ್ಲಿರುವ ನಿರ್ದೇಶಕರಾದ ಶ್ರೀ ಪಿ. ದೇವರಾಜುರವರ ಸಹೋದರರಾದ ಶ್ರೀ ಪಿ. ಶಂಕರ್ ಹಾಗೂ ಶ್ರೀ ಪಿ. ಶಂಕರ್‌ರವರ ಪತ್ನಿ ಶ್ರೀಮತಿ ಗಿರಿಜಾರವರುಗಳು ತಲಾ ರೂ.8.00 ಲಕ್ಷಗಳಂತೆ ದಿ:20.02.2018ರಂದು ಸಾಲ ಪಡೆದಿದ್ದು ಸದರಿ ಸಾಲದ ಖಾತೆಗಳು ದಿ:31.03.2021ಕ್ಕೆ ಕ್ರಮವಾಗಿ ಅಸಲು ರೂ.6,11,482/– ಗಳು ಮತ್ತು ರೂ.6,11,663/–ಗಳು ಬಾಕಿ ಇದ್ದು, ರೂ.18,159/– ಮತ್ತು ರೂ.18,340/–ಗಳು ಸುಸ್ತಿಯಾಗಿರುತ್ತದೆ. ಆದರೆ ಅನುತ್ಪಾದಕ ಆಸ್ತಿಗಳಾಗಿ ಪರಿವರ್ತನೆಗೊಂಡಿರುವುದಿಲ್ಲ.

**ವಿಷಯ 14: ನಿರ್ದೇಶಕರು ಬ್ಯಾಂಕಿನ ಸೇವೆಗಳನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಅವಲೋಕಿಸುವುದು.**

ಪ್ರಸಕ್ತ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರು ಬ್ಯಾಂಕಿನ ವಿವಿಧ ಸೇವೆಗಳಾದ ಉಳಿತಾಯ/ರೆಕರಿಂಗ್/ನಿಶ್ಚಿತ ಅವಧಿ ಠೇವಣಿ ಖಾತೆಗಳನ್ನು ಹೊಂದಿರುತ್ತಾರೆ.

# ಟೆಕ್ಸ್‌ಟೈಲ್ ಕೋ ಆಪರೇಟಿವ್ ಬ್ಯಾಂಕ್ ಲಿ.

**ವಿಷಯ 15: ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು, ಮಾರ್ಚ್–2021ರ ಪ್ರಕಾರ ಬ್ಯಾಂಕಿನ ಉಪನಿಯಮಗಳಿಗೆ ಮಾಡಬೇಕಾದ ತಿದ್ದಪಡಿಗಳು.**

| ಕ್ರಮ ಸಂಖ್ಯೆ | ಅಧ್ಯಾಯ/ ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ತಿದ್ದುಪಡಿಸಿದ ನಿಯಮ | ತಿದ್ದಪಡಿಗೆ ಕಾರಣ |
|---|---|---|---|---|
| 1 | ಅಧ್ಯಾಯ 2 **4.14** | **ಅರ್ಥವಿವರಣೆಗಳು**<br>"ಪ್ರತಿನಿಧಿ' ಎಂದರೆ ಇತರೆ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸಲು ಆಡಳಿತ ಮಂಡಳಿಯಿಂದ ನೇಮಿಸಲ್ಪಟ್ಟ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯ. | "**ಪ್ರತಿನಿಧಿ**" (Delegate) ಎಂದರೆ ಇತರೆ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸಲು ಮತ್ತು ಬ್ಯಾಂಕಿನ ಪರವಾಗಿ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಲು ಚುನಾವಣೆಯಲ್ಲಿ ಮತ ಚಲಾಯಿಸಲು ಹಾಗೂ ಯಾವ ಸಹಕಾರ ಸಂಘ ಪ್ರತಿನಿಧಿಸಲು ನೇಮಕಗೊಂಡಿರುತ್ತಾನೆಯೋ ಅಂತಹ ಸಹಕಾರ ಸಂಘದ ಚುನಾವಣೆಗೆ ಸ್ಪರ್ಧಿಸಲು ನೇಮಿಸಲ್ಪಟ್ಟ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯ. | ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ಕ್ಕೆ ತಿದ್ದುಪಡಿ ಮಾಡಿರುವುದರಿಂದ. |
| 2 | ಅಧ್ಯಾಯ 5 **13.01** | **ಷೇರು ಬಂಡವಾಳ**<br>**ಷೇರುಗಳಿಗಾಗಿ ಅರ್ಜಿ**<br>ಷೇರುಗಳಿಗಾಗಿ ಅರ್ಜಿಯನ್ನು ಬ್ಯಾಂಕಿನ ಮುದ್ರಿತ ನಮೂನೆಯಲ್ಲಿ ಗುರುತಿನ ಮತ್ತು ವಿಳಾಸದ ದಾಖಲೆಗಳು ಮತ್ತು ಅರ್ಜಿದಾರರ ಮೂರು ಭಾವಚಿತ್ರಗಳ ಸಹಿತ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಗೆ ಸಲ್ಲಿಸತಕ್ಕದ್ದು.<br>ಅಂತಹ ಅರ್ಜಿ ಸಹಿತ ಕನಿಷ್ಠ ಒಂದು ಷೇರಿನ ಪೂರ್ಣ ಮೌಲ್ಯ ರೂ. 100/–, ಷೇರು ಶುಲ್ಕ ಪ್ರತಿ ಷೇರಿಗೆ ರೂ. 10/–, ಪ್ರವೇಶಧನ ರೂ. 20/– ಮತ್ತು ಕಾಲಕಾಲಕ್ಕೆ ಆಡಳಿತ ಮಂಡಳಿ ನಿಗಧಿಪಡಿಸಿದಂತೆ ಅರ್ಜಿ ಶುಲ್ಕವನ್ನು ಸಲ್ಲಿಸತಕ್ಕದ್ದು. | "**ಷೇರುಗಳಿಗೆ ಅರ್ಜಿ**"ಯನ್ನು ಬ್ಯಾಂಕಿನ ಮುದ್ರಿತ ನಮೂನೆಯಲ್ಲಿ ಗುರುತಿನ ಮತ್ತು ವಿಳಾಸದ ದಾಖಲೆಗಳು ಮತ್ತು ಅರ್ಜಿದಾರನ ಮೂರು ಭಾವಚಿತ್ರಗಳ ಸಹಿತ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಾಹಕರಿಗೆ / ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.<br>ಅಂತಹ ಅರ್ಜಿ ಸಹಿತ ಕನಿಷ್ಠ 10 ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳ ಷೇರು ಶುಲ್ಕ ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶಧನ ಪಾವತಿಸತಕ್ಕದ್ದು. | |
| 3 | **13.02** | ಷೇರು ಅರ್ಜಿಗಳನ್ನು ನಿರ್ದೇಶಕ ಮಂಡಳಿಯು ಎರಡು ತಿಂಗಳೊಳಗೆ ವಿಲೇವಾರಿ ಮಾಡತಕ್ಕದ್ದು | ಷೇರು ಅರ್ಜಿಗಳನ್ನು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು.<br>ಕಾಯಿದೆ ಕಲಂ 22ರಲ್ಲಿ ನಮೂದಿಸಿದ ಘಟಕಗಳನ್ನು ಹೊರತುಪಡಿಸಿ ಬ್ಯಾಂಕಿನ ಯಾವುದೇ ಸದಸ್ಯನ ಒಟ್ಟು ಷೇರು ಬ್ಯಾಂಕಿನ ಒಟ್ಟು ಷೇರು ಬಂಡವಾಳದಲ್ಲಿ ಶೇ.5ರಷ್ಟನ್ನು ಮೀರತಕ್ಕದ್ದಲ್ಲ. | |

| ಕ್ರಮ ಸಂಖ್ಯೆ | ಅಧ್ಯಾಯ/ ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ತಿದ್ದುಪಡಿಸಿದ ನಿಯಮ | ತಿದ್ದಪಡಿಗೆ ಕಾರಣ |
|---|---|---|---|---|
| 4 | ಅಧ್ಯಾಯ 6<br>**19**<br>**19.05** | **ಸದ್ಯಸರ ಪ್ರವೇಶ, ಅರ್ಹತೆಗಳು, ರದ್ದತಿ, ಹಕ್ಕುಗಳು ಮತ್ತು ಜವಾಬ್ದಾರಿಗಳು**<br>**ಸದಸ್ಯತ್ವ ಪ್ರವೇಶಕ್ಕೆ ಅರ್ಹತೆಗಳು**<br>ವ್ಯಕ್ತಿಯು ಬ್ಯಾಂಕಿನ ಅಥವಾ ಹಣ ಸಹಾಯ ಒದಗಿಸುವ ಬ್ಯಾಂಕಿನ ನೌಕರನಾಗಿ / ಳಾಗಿರಬಾರದು | ಬ್ಯಾಂಕಿನ ಯಾರೇ ಸದಸ್ಯರು ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ಅಥವಾ ಅದರ ಒಕ್ಕೂಟ ಅಥವಾ ಅವರ ಸಂಯುಕ್ತ ಸಂಘದ ನೌಕರನಾಗಿರತಕ್ಕದ್ದಲ್ಲ. | |
| 5 | ಅಧ್ಯಾಯ 6<br>**21.02**<br>**(ಈ)** | **ನಿಯಮಿತ ಸದಸ್ಯರ ಜವಾಬ್ದಾರಿಗಳು**<br><br>ಒಬ್ಬ ಸದಸ್ಯ, ಒಬ್ಬ ಪ್ರತಿನಿಧಿ ಅಥವಾ ಒಬ್ಬ ನಿಯೋಜಿತ ಹಿಂದಿನ ಐದು ವಾರ್ಷಿಕ ಸರ್ವ ಸದಸ್ಯರ ಸಭೆಗಳ ಪೈಕಿ ಮೂರು ವಾರ್ಷಿಕ ಸರ್ವಸದಸ್ಯರ ಸಭೆಗಳಿಗೆ ಹಾಜರಾಗಲು ವಿಫಲನಾದಲ್ಲಿ ಸರ್ವ ಸದಸ್ಯರ ಸಭೆಯಲ್ಲಿ ಅಥವಾ ಆಡಳಿತ ಮಂಡಳಿ ಸದಸ್ಯರ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕು ಹೊಂದಿರುವುದಿಲ್ಲ.<br><br>• ಕನಿಷ್ಠ ಠೇವಣಿ ರೂ. 2,500/– ಅಥವಾ<br>• ಎರಡು ವರ್ಷದ ಮಾಸಿಕ ರೂ. 100/– ರ ಆವರ್ತ ಠೇವಣಿ ಅಥವಾ<br>• ಉಳಿತಾಯ/ಚಾಲ್ತಿ ಖಾತೆಯಲ್ಲಿ ಒಂದು ವರ್ಷದಲ್ಲಿ ಕನಿಷ್ಠ ಆರು ವಹಿವಾಟುಗಳು ಮತ್ತು ಖಾತೆಯಲ್ಲಿ ಕನಿಷ್ಠ ಧನ ಶಿಲ್ಕು ನಿರ್ವಹಣೆ ಅಥವಾ<br>• ನಿಯಮಗಳಿಗೆ ಒಳಪಟ್ಟು ರೂ. 5000/– ಸಾಲ ಪಡೆಯದ ಸದಸ್ಯರುಗಳು<br><br>**ಸೂಚನೆ :** ಸದಸ್ಯನು ಹಿಂದಿನ ಐದು ಸರ್ವ ಸದಸ್ಯರ ಸಭೆಗಳ ಪೈಕಿ ಕನಿಷ್ಠ ಮೂರು ಸರ್ವ ಸದಸ್ಯರ ಸಭೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು ಬ್ಯಾಂಕು ನೀಡುವ ಕನಿಷ್ಠ ಸೇವೆಗಳನ್ನು ಸತತವಾಗಿ ಮೂರು | (ಈ) ಬ್ಯಾಂಕಿನ ಒಬ್ಬ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಠ ಪಡಿಸಿದಂತೆ ಬ್ಯಾಂಕು ದೊರಕಿಸಿ ಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಿಸಿಕೊಳ್ಳಲು ತಪ್ಪಿದ್ದಲ್ಲಿ ಅಂಥಹ ಸದಸ್ಯನು ಒಂದು ವರ್ಷಗಳ ವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.<br>• ಕನಿಷ್ಠ ಠೇವಣಿ ರೂ. 2,500/– ಅಥವಾ<br>• ಎರಡು ವರ್ಷದ ಮಾಸಿಕ ರೂ. 100/– ರ ಆವರ್ತ ಠೇವಣಿ ಅಥವಾ<br>• ಉಳಿತಾಯ/ಚಾಲ್ತಿ ಖಾತೆಯಲ್ಲಿ ಒಂದು ವರ್ಷದಲ್ಲಿ ಕನಿಷ್ಠ ಆರು ವಹಿವಾಟುಗಳು ಮತ್ತು ಖಾತೆಯಲ್ಲಿ ಕನಿಷ್ಠ ಧನ ಶಿಲ್ಕು ನಿರ್ವಹಣೆ ಅಥವಾ<br>• ನಿಯಮಗಳಿಗೆ ಒಳಪಟ್ಟು ರೂ. 5000/– ಸಾಲ ಪಡೆಯದ ಸದಸ್ಯರುಗಳು | |

| ಕ್ರಮ ಸಂಖ್ಯೆ | ಅಧ್ಯಾಯ/ ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ತಿದ್ದುಪಡಿಸಿದ ನಿಯಮ | ತಿದ್ದಪಡಿಗೆ ಕಾರಣ |
|---|---|---|---|---|
| | | ವರ್ಷಗಳು ಪಡೆಯಲು ವಿಫಲನಾದಲ್ಲಿ ಆತನು ಮುಂದಿನ ಮೂರು ವರ್ಷಗಳು ಮತ ಚಲಾಯಿಸುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. | **ಸೂಚನೆ :** ಸದಸ್ಯನು ಹಿಂದಿನ ಐದು ಸರ್ವ ಸದಸ್ಯರ ಸಭೆಗಳ ಪೈಕಿ ಕನಿಷ್ಠ ಎರಡು ಸರ್ವ ಸದಸ್ಯರ ಸಭೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು ಬ್ಯಾಂಕು ನೀಡುವ ಕನಿಷ್ಠ ಸೇವೆಗಳನ್ನು ಸತತವಾಗಿ ಎರಡು ವರ್ಷಗಳು ಪಡೆಯಲು ವಿಫಲನಾದಲ್ಲಿ ಆತನು ಮುಂದಿನ ಒಂದು ವರ್ಷ ಮತ ಚಲಾಯಿಸುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. | |
| 6 | ಅಧ್ಯಾಯ 10<br>**61**<br>**61.01** | **ನಿರ್ದೇಶಕ ಮಂಡಳಿ**<br><br>**ನಿರ್ದೇಶಕ ಮಂಡಳಿಯಲ್ಲಿ ತೆರವಾದ ಸ್ಥಾನಗಳು**<br>ಮಂಡಳಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ ಬ್ಯಾಂಕಿನ ಯಾರೇ ಪಧಾಧಿಕಾರಿಯ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳುವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಅಂತಹ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಬ್ಯಾಂಕಿನ ಮಂಡಳಿಯು ಸಹಕಾರ ಚುನಾವನಾ ಆಯೋಗಕ್ಕೆ ತಿಳಿಸತಕ್ಕದ್ದು. | ಮಂಡಳಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕ ಪದದಲ್ಲಿ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. ಪರಂತು ಮಂಡಳಿಯು ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ ಪೈಕಿ ನಾಮ ನಿರ್ದೇಶನ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿಮಾಡಬಹುದು. | |
| 7 | ಅಧ್ಯಾಯ 16<br>**111**<br>**111.01** | **ಮಾನವಸಂಪನ್ಮೂಲ ನಿರ್ವಹಣೆ**<br><br>**ಸಿಬ್ಬಂದಿ ನೇಮಕಾತಿ ವಿಧಾನ**<br>ಆಡಳಿತ ಮಂಡಳಿಯು, ಬ್ಯಾಂಕಿನ ನಿರ್ದೇಶಕನನ್ನು ಹೊರತುಪಡಿಸಿ, ನಾಮಕರಣ ಮಾಡಿದ ಸಹಕಾರ ಕ್ಷೇತ್ರದ ಚಟುವಟಿಕೆಗಳಲ್ಲಿ ಅನುಭವ ಉಳ್ಳ ಒಬ್ಬ ಪರಿಣಿತ ವ್ಯಕ್ತಿ; ಸಂಚಾಲಕ ಸದಸ್ಯರಾಗಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ನೇರ | ನೇರ ನೇಮಕಾತಿಗಾಗಿ ನೇಮಕಾತಿ ಸಮಿತಿಯು ಬ್ಯಾಂಕಿನ ಅಧ್ಯಕ್ಷರು, ಬ್ಯಾಂಕಿನ ಒಬ್ಬ ನಿರ್ದೇಶಕರು, ನಿರ್ದೇಶಕ ಮಂಡಳಿಯಿಂದ ನಾಮಕರಣಗೊಂಡ ಸಹಕಾರ ಕ್ಷೇತ್ರದಲ್ಲಿ ಅನುಭವವುಳ್ಳ ಒಬ್ಬ ಪರಿಣಿತ ವ್ಯಕ್ತಿ, ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ ಹಾಗೂ ಸಂಚಾಲಕರಾಗಿ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಇರುವ ಒಂದು ನೇಮಕಾತಿ ಸಮಿತಿ. | ಸಹಕಾರ ಸಂಘಗಳ ನಿಯಮ 17ಎ ರಲ್ಲಿ ತಿಳಿಸಿರುವಂತೆ ತಿದ್ದುಪಡಿಗೊಳಿಸಿ ಅಳವಡಿಸಿ ಕೊಳ್ಳಲಾಗಿದೆ. |

| ಕ್ರಮ ಸಂಖ್ಯೆ | ಅಧ್ಯಾಯ/ ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ತಿದ್ದುಪಡಿಸಿದ ನಿಯಮ | ತಿದ್ದಪಡಿಗೆ ಕಾರಣ |
|---|---|---|---|---|
| | | ನೇಮಕಾತಿ ಪ್ರಕ್ರಿಯೆಯು ಈ ಸಮಿತಿಯ ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದ್ದು.<br>ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ ಇಲ್ಲದೆ ನೇಮಕಾತಿ ಸಮಿತಿಯ ಸಭೆಯನ್ನು ನಡೆಸುವಂತಿಲ್ಲ. ಮುಖ್ಯ ಕಾರ್ಯನಿರ್ವಹ-ಣಾಧಿಕಾರಿಯು ನೇಮಕಾತಿ ಪ್ರಕ್ರಿಯೆ ಮತ್ತು ಆಯ್ಕೆಗೆ ಸಂಬಂಧಿಸಂತೆ ಎಲ್ಲಾ ವ್ಯವಸ್ಥೆಗಳನ್ನು ಮಾಡತಕ್ಕದ್ದು.<br>ಸಭೆಗಳಿಗೆ ಸಭಾವಶ್ಯಕ ಸಂಖ್ಯೆಯು ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ ಕನಿಷ್ಠ ಮೂರು ಇರತಕ್ಕದ್ದು. | ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ ಇಲ್ಲದೇ ನೇಮಕಾತಿ ಸಮಿತಿಯ ಸಭೆಯನ್ನು ನಡೆಸುವಂತಿಲ್ಲ.<br>ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ನೇಮಕಾತಿ ಪ್ರಕ್ರಿಯೆ ಮತ್ತು ಆಯ್ಕೆಗೆ ಸಂಬಂಧಿಸಿದಂತೆ ಎಲ್ಲಾ ವ್ಯವಸ್ಥೆಗಳನ್ನು ಮಾಡತಕ್ಕದ್ದು.<br>ಸಭೆಗಳಿಗೆ ಸಭಾವಶ್ಯಕ ಕೋರಂ ಸಂಖ್ಯೆಯು ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ ಸೇರಿದಂತೆ ಕನಿಷ್ಠ ಮೂರು ಇರತಕ್ಕದ್ದು. | |
| 8 | ಅಧ್ಯಾಯ 16<br>**112.01** | **ಮಾನವಸಂಪನ್ಮೂಲ ನಿರ್ವಹಣೆ**<br><br>**ನೇಮಕಾತಿಗೆ ಬೇಕಾದ ವಿದ್ಯಾರ್ಹತೆಗಳು**<br>ಈ.ಡಿ.ಪಿ ವ್ಯವಸ್ಥಾಪಕರು / ಗಣಕಯಂತ್ರಗಳ ನಿರ್ವಹಣಾಧಿಕಾರಿ ಎಲೆಕ್ಟ್ರಾನಿಕ್ ಮತ್ತು ಟೆಲಿ ಕಮ್ಯುನಿಕೇಷನ್ ಅಥವಾ ಕಂಪ್ಯೂಟರ್ ವಿಜ್ಞಾನದಲ್ಲಿ ಪದವಿ ಹೊಂದಿರಬೇಕು. | ಈ.ಡಿ.ಪಿ ವ್ಯವಸ್ಥಾಪಕರು/ಗಣಕಯಂತ್ರಗಳ ನಿರ್ವಹಣಾಧಿಕಾರಿ ಎಲೆಕ್ಟ್ರಾನಿಕ್ ಮತ್ತು ಟೆಲಿಕಮ್ಯುನಿಕೇಷನ್ ಅಥವಾ ಕಂಪ್ಯೂಟರ್ ವಿಜ್ಞಾನದಲ್ಲಿ ಪದವಿ ಅಥವಾ ಸಾಮಾನ್ಯ ಪದವಿ ಮತ್ತು IIBF ನಿಂದ ದಿಪ್ಲೊಮೊ ಇನ್ ಬ್ಯಾಂಕಿಂಗ್ ಟೆಕ್ನಾಲಜಿ ಪದವಿ ಹೊಂದಿರಬೇಕು. | |



ಬ್ಯಾಂಕಿನಿಂದ ಶೀಘ್ರದಲ್ಲೆ ಎ.ಟಿ.ಎಂ.
ಸೌಲಭ್ಯಕ್ಕೆ ಚಾಲನೆ ದೊರೆಯುವುದು.



ಆನೇಕಲ್‌ನಲ್ಲಿ ಬ್ಯಾಂಕಿನ ಸ್ವಂತ
ನೂತನ ಕಟ್ಟಡದ ನಿರ್ಮಾಣಕ್ಕೆ
ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು,
ಸಿಬ್ಬಂದಿಗಳು ಹಾಗೂ ಕಂಟ್ರಾಕ್ಟರ್‌ರವರಿಂದ
ಭೂಮಿ ಪೂಜೆ.



ಆನೇಕಲ್‌ನಲ್ಲಿ ಬ್ಯಾಂಕಿನ ಸ್ವಂತ
ನೂತನ ಕಟ್ಟಡ ನಿರ್ಮಾಣಕ್ಕೆ ಅಧ್ಯಕ್ಷರು ಭೂಮಿ
ಪೂಜೆ ಮಾಡಿ ಚಾಲನೆ ನೀಡಿದ ನೋಟ.



ಆನೇಕಲ್ ಶಾಖಾ ಕಛೇರಿಯ ಸ್ವಂತ
ನೂತನ ಕಟ್ಟಡದ ಕಾಮಗಾರಿಯ ಒಂದು ನೋಟ.

## ಮುಖ್ಯ ಶಾಖೆ :

1ನೇ ಮಹಡಿ, ದೇವಾಂಗ ಮಾರ್ಕೆಟ್, ಜೆ.ಎಂ. ರಸ್ತೆ, ಬೆಂಗಳೂರು – 560 002 ಫೋನ್ : 080–4852 1054

## ಶಾಖೆಗಳು :

| | | |
|---|---|---|
| ಸುಧಾಮನಗರ | : | ನಂ.16, 1ನೇ 'ಎ' ಮುಖ್ಯರಸ್ತೆ, ಸುಧಾಮನಗರ, ಬೆಂಗಳೂರು – 560 027. ಫೋನ್: 4124 1207 |
| ಆಡುಗೋಡಿ | : | ನಂ.11, 3ನೇ ಅಡ್ಡರಸ್ತೆ, ಗ್ರಾಮ ದೇವತಾ ಬೀದಿ, ಆಡುಗೋಡಿ, ಬೆಂಗಳೂರು–560030. ಫೋನ್: 25703133. |
| ಮಾಗಡಿ ರಸ್ತೆ | : | ನಂ.38/1, 7ನೇ ಅಡ್ಡರಸ್ತೆ, (ಅಂಜನ್ ಟಾಕೀಸ್ ಹತ್ತಿರ), ಮಾಗಡಿ ಮುಖ್ಯರಸ್ತೆ, ಬೆಂಗಳೂರು – 560 023. ಫೋನ್: 23389481. |
| ಲಕ್ಷ್ಮೀನಾರಾಯಣಪುರ | : | ನಂ.14/4, 10ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಬೆಂಗಳೂರು–560021. ಫೋನ್: 23325357. |
| ಗೊಟ್ಟಿಗೆರೆ | : | ನಂ.1562/1575/825, 2ನೇ ಅಡ್ಡರಸ್ತೆ, ವೀವರ್ಸ್ ಕಾಲೋನಿ, ಗೊಟ್ಟಿಗೆರೆ ಪೋಸ್ಟ್, ಬೆಂಗಳೂರು – 560 083. ಫೋನ್: 28429403. |
| ಆನೇಕಲ್ | : | ನಂ.1/1, ತಾಲ್ಲೂಕು ಕಛೇರಿ ರಸ್ತೆ, ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಎದುರು, ಆನೇಕಲ್, ಬೆಂಗಳೂರು – 562 106. ಫೋನ್: 27830603. |
| ನೆಲಮಂಗಲ | : | ಖಾತ ನಂ.3921/2661/12, 3584/2661/1, ವೀವರ್ಸ್ ಕಾಲೋನಿ, ನೆಲಮಂಗಲ ಟೌನ್, ಬೆಂಗಳೂರು – 562 123. ಫೋನ್: 27722993. |
| ಉತ್ತರಹಳ್ಳಿ | : | ನಂ.56/4, 8/2, ಆಂಜನೇಯ ಸ್ವಾಮಿ ದೇವಸ್ಥಾನ ಹತ್ತಿರ, ಸುಬ್ರಮಣ್ಯಪುರ ಪೋಸ್ಟ್, ಉತ್ತರಹಳ್ಳಿ, ಬೆಂಗಳೂರು – 560061. ಫೋನ್: 26394039. |
| ಯಲಹಂಕ | : | ವೈಸಿಸಿ ಪ್ರೀಮಿಯರ್ ಕಾಂಪ್ಲೆಕ್ಸ್, ನಂ.306/728, ಟಿಎಂಸಿ ರಸ್ತೆ, ಯಲಹಂಕ ಹಳೇಬಸ್ ನಿಲ್ದಾಣ ಹತ್ತಿರ, ಹಳೇ ಯಲಹಂಕ ಟೌನ್, ಬೆಂಗಳೂರು – 560 064. ಫೋನ್ : 28562373. |

**BOOK-POST**

To,
Smt./Sri

*If undelivered please return to :*

**TEXTILE CO-OPERATIVE BANK LTD.**

**A.O. : Devanga Market, Jumma Masjid Road, Bengaluru - 560 002.**

**Phone : 080-4852 1054**